# ಹಂಪಿ ಟೈಮ್ಸ್

**ಸಂಪಾದಕ:** ಬಸಾಪುರ ಬಸವರಾಜ
**EDITOR:** BASAPUR BASAVARAJA

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 270 Issue: 270 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 03.05.2025 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2




1,25,000+
Digital E-PAPER READERS
To book Classified Display Ad in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper


# ವಿಜಯನಗರ ಗಮನಾರ್ಹ ಸಾಧನೆ

## ಒಗ್ಗಟ್ಟಿನ ಪರಿಶ್ರಮದ ಫಲಿತಾಂಶ

## ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಹಂಪಿ ಟೈಮ್ಸ್ ವಿನೂತನ ಕಾರ್ಯಾಗಾರಗಳು ಯಶಸ್ವಿ

### 624 ಅಂಕ ಪಡೆದ ಹೊಸಪೇಟೆ ತಾಲೂಕಿನ ವಿದ್ಯಾರ್ಥಿ ಯಶ್ವಂತ್ ಸಿ.ಜಿ.

### ಜಿಲ್ಲೆಯಲ್ಲಿ 7,424 ವಿದ್ಯಾರ್ಥಿನಿಯರು, 5,689 ವಿದ್ಯಾರ್ಥಿಗಳು ಪಾಸ್

**ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂ ಸಿಇಒ ನೋಂಗ್ಜಾಯ್ ಮೊಹ್ಮದ್ ಅಕ್ರಮ ಅಲಿಷಾ, ಡಿಡಿಪಿಐ ವೆಂಕಟೇಶ ರಾಮಚಂದ್ರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ, ಹರ್ಷ**

■ **ಹಂಪಿ ಟೈಮ್ಸ ಹೊಸಪೇಟೆ**

2024–25ರ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ವಿಜಯನಗರ ಜಿಲ್ಲೆ ರಾಜ್ಯದಲ್ಲಿ 27ನೇ ಸ್ಥಾನದಿಂದ 19ನೇ ಸ್ಥಾನಕ್ಕೆ ಜಿಗಿದು ಗಮನಾರ್ಹ ಸಾಧನೆ ದಾಖಲಿಸಿದೆ. ಕಳೆದ ಬಾರಿಯ ಫಲಿತಾಂಶ ಹೋಲಿಸಿಕೊಂಡಾಗ ಈ ವರ್ಷದ ಫಲಿತಾಂಶವು ಶಿಕ್ಷಣ ಇಲಾಖೆಗೆ ಹೊಸ ದೈರ್ಯ ತುಂಬಿದೆ.ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮತ್ತು ಜಿಲ್ಲಾ ಪಂಚಾಯತ್ ಸಿಇಒ ನೋಂಗ್ಜಾಯ್ ಮೊಹ್ಮದ್ ಅಕ್ರಮ್ ಅಲಿ ಶಾ ಮತ್ತು ಪೊಲೀಸ್ ವರೀಷ್ಠಾಧಿಕಾರಿ ಬಿ.ಎಲ್. ಹರಿಬಾಬು ಅವರ ಮಾರ್ಗದರ್ಶನ, ಶಿಕ್ಷಕರ, ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಹಂಪಿ ಟೈಮ್ಸ್ ದಿನಪತ್ರಿಕೆಯ ನಿರಂತರ ಸಹಕಾರದಿಂದ ಈ ಬಾರಿ ಉತ್ತಮ ಫಲಿತಾಂಶ ನಮ್ಮ ವಿಜಯನಗರ ಜಿಲ್ಲೆಯದ್ದಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವೆಂಕಟೇಶ್ ರಾಮಚಂದ್ರಪ್ಪ ತಿಳಿಸಿದರು.

ವಿಜಯನಗರ ಜಿಲ್ಲೆಯ ಐದು ತಾಲೂಕುಗಳ ಪೈಕಿ ಹಡಗಲಿ ತಾಲೂಕು ಶೇ.77.07 ಫಲಿತಾಂಶದೊಂದಿಗೆ ಪ್ರಥಮ ಸ್ಥಾನ, ಹ.ಬೊ.ಹಳ್ಳಿ ಶೆ.75.44 (ದ್ವಿತೀಯ), ಕೂಡ್ಲಿಗಿ ಶೇ.67.56 (ತೃತೀಯ), ಹೊಸಪೇಟೆ ಶೇ.63.29(ನಾಲ್ಕನೆ ಸ್ಥಾನ) ಹಾಗೂ ಹರಪನಹಳ್ಳಿ ಶೇ.56.76 ಫಲಿತಾಂಶ ಪಡೆದಿವೆ.

2024–25ರ ಸಾಲಿನಲ್ಲಿ ರಾಜ್ಯದಲ್ಲಿ ವಿಜಯನಗರ ಜಿಲ್ಲೆ ಶೇ.67.62 ಫಲಿತಾಂಶದೊಂದಿಗೆ 19ನೇ ಸ್ಥಾನ ಕ್ಕೇರಿದೆ. 2023–24ರಲ್ಲಿ ಶೇ.65.61ರಷ್ಟು ಫಲಿತಾಂಶ ಜಿಲ್ಲೆಯದ್ದಾಗಿತ್ತು.

ಹೊಸಪೇಟೆ ತಾಲೂಕಿನ ಬುಕ್ಕಸಾಗರದ ಮೊರಾರ್ಜಿ ವಸತಿ ಶಾಲೆ ಪಂಪಾ ವಿದ್ಯಾಪೀಠದ ಯಶ್ವಂತ್ ಸಿ.ಜಿ. 625ಕ್ಕೆ 624 (ಶೇ.99.84) ಅಂಕ ಪಡೆದು ರಾಜ್ಯಕ್ಕೆ ಎರಡನೇ ರ್‍ಯಾಂಕ್ ಪಡೆದಿದ್ದಾರೆ. ಹೊಸಪೇಟೆ ಜೇಸಿಸ್ ಆಂಗ್ಲ ಶಾಲೆಯ ವಿದ್ಯಾರ್ಥಿ ಎನ್.ಆರ್.ಅಭಿಶೇಕ್ 625ಕ್ಕೆ 624 (ಶೇ.99.36), ಮರಿಯಮ್ಮನಹಳ್ಳಿಯ ಪ್ರಾರ್ಥನ ಆಂಗ್ಲ ಮಾಧ್ಯಮ ಶಾಲೆಯ ಕೆ.ಅಮೂಲ್ಯ 625ಕ್ಕೆ 620 (ಶೇ.99.2), ಸರ್ಕಾರಿ ಆದರ್ಶ ವಿದ್ಯಾಲಯದ ಎಂ.ರಿತಿಶಾ 625ಕ್ಕೆ 612 (ಶೇ.98.56), ಮಾರ್ಕಂಡೇಶ್ವರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಯಶೋಧ ದಾಸರ್ 625ಕ್ಕೆ 616 (ಶೇ.98.56), ಬುಕ್ಕಸಾಗರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿನಿ ಸಹನಾ ಬಿ.ಜಿ. 625ಕ್ಕೆ 616 (ಶೇ.98.56) ಅಂಕ ಪಡೆದು ತಾಲೂಕಿಗೆ ಟಾಪರ್ ಆಗಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಶೇ.58.31 ಫಲಿತಾಂಶ, ಅನುದಾನಿತ ಶಾಲೆಗಳಲ್ಲಿ ಶೇ.70.54 ಫಲಿತಾಂಶ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಶೇ.65.47 ಫಲಿತಾಂಶ ಪಡೆದಿವೆ. ಹೊಸಪೇಟೆ ತಾಲೂಕಿನಲ್ಲಿ ಕನ್ನಡ, ಉರ್ದು, ತಮಿಳು, ತೆಲುಗು ಮಾಧ್ಯಮ ಶಾಲೆಗಳಿವೆ. ಹೊಸಪೇಟೆ ತಾಲೂಕಿನ ವಿದ್ಯಾರ್ಥಿ ಯಶ್ವಂತ್ ಸಿ.ಜಿ.624 ಅಂಕ ಪಡೆಯುವ ಮೂಲಕ ತಾಲೂಕಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ ತಿಳಿಸಿದ್ದಾರೆ.

| ಸ್ಥಾನ | ತಾಲೂಕು | ಒಟ್ಟು ವಿದ್ಯಾರ್ಥಿಗಳು | ಉತ್ತೀರ್ಣ | ಶೇಕಡ ಫಲಿತಾಂಶ |
|---|---|---|---|---|
| 1 | ಹಡಗಲಿ | 2,699 | 2080 | 77.07 |
| 2 | ಹ.ಬೊ.ಹಳ್ಳಿ | 2,993 | 2258 | 75.44 |
| 3 | ಕೂಡ್ಲಿಗಿ | 4,788 | 3,235 | 67.56 |
| 4 | ಹೊಸಪೇಟೆ | 5,249 | 3,322 | 63.29 |
| 5 | ಹರಪನಹಳ್ಳಿ | 3,908 | 2,218 | 56.76 |
| | ಒಟ್ಟು | **19,637** | **13,113** | **68.02** |



**ಯಶ್ವಂತ್ ಸಿ.ಜಿ. 625ಕ್ಕೆ 624 (ಶೇ.99.84)**
**ಕನ್ನಡ–125, ಇಂಗ್ಲೀಷ್–99, ಹಿಂದಿ–100, ಗಣಿತ–100, ವಿಜ್ಞಾನ–100, ಸಮಾಜ ವಿಜ್ಞಾನ–100**



ಕಳೆದ ಬಾರಿ ವಿದ್ಯಾರ್ಥಿಗಳಿಗೆ ಗ್ರೇಸ್ ಮಾರ್ಕ್ಸ್ ನೀಡಲಾಗಿತ್ತು. ಈ ಬಾರಿ ಗ್ರೇಸ್ ಮಾರ್ಕ್ಸ್ ಇಲ್ಲದೆಯೇ ಎಸ್ಸೆಸ್ಸೆಲ್ಸಿ ಶೇಕಡವಾರು ಫಲಿತಾಂಶ ತಾಲೂಕಿನಲ್ಲಿ ವೃದ್ಧಿಸಿದೆ. ಅಲ್ಲದೆ ತಾಲೂಕಿನ ವಿದ್ಯರ್ಥಿ ಯಶ್ವಂತ್ ಸಿ.ಜಿ. 624 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಎರಡನೆ ರ್‍ಯಾಂಕ್ ಪಟ್ಟಿಯಲ್ಲಿರುವುದು ಗಮನಾರ್ಹ, ಹಂಪಿ ಟೈಮ್ಸ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಷನ್ 625, ಗ್ಯಾರಂಟಿ 625, ಫೋನ್ ಇನ್ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದವು.

– **ಎಂ.ಚನ್ನಬಸಪ್ಪ** ನಿವೃತ್ತ ಬಿಇಒ, ಹೊಸಪೇಟೆ



ಹಂಪಿ ಟೈಮ್ಸ್ ದಿನಪತ್ರಿಕೆ ಶೈಕ್ಷಣಿಕ ಪ್ರಗತಿಗೆ ಸಹಕಾರಿಯಾಗಿ ಕಾರ್ಯನಿರ್ವಹಿಸಿರುವುದು ಶ್ಲಾಘನೀಯ. ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರ ಮೆಚ್ಚಿನ ಪತ್ರಿಕೆಯಾಗಿದೆ. ಶೈಕ್ಷಣಿಕ ಪ್ರಗತಿಗೆ ಹಂಪಿ ಟೈಮ್ಸ್ ಕೊಡುಗೆ ಅಪಾರ.

– **ಹೆಚ್.ವಿ.ಶರಣಸ್ವಾಮಿ**
ಹಿರಿಯ ಮುಖಂಡರು, ಹೊಸಪೇಟೆ.



ವಿಜಯನಗರ ಜಿಲ್ಲೆಯ ಫಲಿತಾಂಶ ಕಳೆದಬಾರಿಗಿಂತ ಉತ್ತಮ ಸ್ಥಾನಕ್ಕೇರಿದ್ದು, ಗಮನಾರ್ಹ ಸಾಧನೆಯಾಗಿದೆ. ಜಿಲ್ಲಾಡಳಿತ ಸೂಚಿಸಿದ ಶೈಕ್ಷಣಿಕ ಪ್ರಗತಿಯ ಚಟುವಟಿಕೆಗಳಲ್ಲಿ ತೊಡಗಿದ ಶಿಕ್ಷಣ ಇಲಾಖೆಯ ಸಮಸ್ತ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗಳ ಪರಿಶ್ರಮದ ಫಲಿತಾಂಶ ಇದಾಗಿದೆ. ಫಲಿತಾಂಶ ಸುಧಾರಣೆಗೆ ಮತ್ತಷ್ಟು ಯೋಜನೆಗಳನ್ನು ರೂಪಿಸಲಾಗುವುದು. ಫಲಿತಾಂಶ ಸುಧಾರಣೆಗೆ ಪರಿಶ್ರಮಪಟ್ಟ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ವರ್ಷಪೂರ್ತಿ ಉಚಿತವಾಗಿ ಪ್ರಶ್ನೋತ್ತರ ಪ್ರಕಟಿಸಿ ವಿದ್ಯಾರ್ಥಿಗಳ ಕಲಿಕಗೆ ಪ್ರೋತ್ಸಾಹಿಸಿದ ಹಂಪಿ ಟೈಮ್ಸ್ ಪತ್ರಿಕೆಗೂ ಅಭಿನಂದನೆಗಳು.

– **ಎಂ.ಎಸ್.ದಿವಾಕರ** ಜಿಲ್ಲಾಧಿಕಾರಿ, ವಿಜಯನಗರ ಜಿಲ್ಲೆ.



ಜಿಲ್ಲಾಧಿಕಾರಿ, ಜಿಪಂ ಸಿಇಒ ಅವರ ಮಾರ್ಗದರ್ಶನದಲ್ಲಿ ಶೈಕ್ಷಣಿಕ ಪ್ರಗತಿಗೆ ಹಲವು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು. ಶಿಕ್ಷಕರು ಹೆಚ್ಚಿನ ತರಗತಿ ಕೈಗೊಂಡು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸಿದ್ದಾರೆ. ಕಳೆದಬಾರಿ ಜಿಲ್ಲೆ ರಾಜ್ಯಕ್ಕೆ 27ನೇ ಸ್ಥಾನದಲ್ಲಿತ್ತು. ಈ ಬಾರಿ 19ನೇ ಸ್ಥಾನಕ್ಕೇರಿರುವುದು ಹರ್ಷ ತಂದಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇನ್ನಷ್ಟು ಯೋಜನೆ ರೂಪಿಸಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಾಗುವುದು.
ವಿಜಯನಗರ ಜಿಲ್ಲೆಯ ವಿದ್ಯಾರ್ಥಿ ರಾಜ್ಯಕ್ಕೆ 624 ಅಂಕ ತಂದಿರುವುದು ಹೆಮ್ಮ. ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು

– **ವೆಂಕಟೇಶ ರಾಮಚಂದ್ರಪ್ಪ** ಡಿಡಿಪಿಐ, ವಿಜಯನಗರ..

## ಎಸ್ಸೆಸ್ಸೆಲ್ಸಿ ಫಲಿತಾಂಶ
## 2024-25ನೇ ಸಾಲಿನಲ್ಲಿ
# 19 ನೇ ಸ್ಥಾನಕ್ಕೆ ಜಿಗಿತ

## ಶಿಕ್ಷಣದಲ್ಲಿ ಮಾಧ್ಯಮ ಪಾತ್ರ

ಈ ಭಾರಿ ಎಸ್ಸೆಸ್ಸೆಲ್ಸಿ ಫಲಿತಾಂಶ ನಮ್ಮದೆ ಎಂಬ ಘೋಷವಾಕ್ಯದೊಂದಿಗೆ ವಿಜಯನಗರದ ಹೆಮ್ಮೆಯ ಹಂಪಿ ಟೈಮ್ಸ್ ಕನ್ನಡ ದಿನಪತ್ರಿಕೆ ವರ್ಷಪೂರ್ತಿ ಕನ್ನಡ, ಗಣಿತ, ಇಂಗ್ಲೀಷ್, ವಿಜ್ಞಾನ, ಹಿಂದಿ ಹಾಗೂ ಸಮಾಜ ವಿಜ್ಞಾನ ವಿಷಯಗಳನ್ನು ಪ್ರಶ್ನೋತ್ತರ ಸರಣಿ ಮೂಲಕ ಪ್ರತಿನಿತ್ಯ ದಿನಕ್ಕೊಂದು ವಿಷಯದಂತೆ ಪ್ರಕಟಿಸುತ್ತಾ, ವಿದ್ಯಾರ್ಥಿಗಳಲ್ಲಿ ಕಲಿಕಾಸಕ್ತಿ ಹೆಚ್ಚಿಸುತ್ತಾ ಬಂದಿತು. ತಾಲೂಕಿನ ಆಯ್ದ ಕೆಲ ಸರ್ಕಾರಿ ಶಾಲಾ ಮಕ್ಕಳಿಗೆ ವರ್ಷಪೂರ್ತಿ ಉಚಿತ ದಿನಪತ್ರಿಕೆಗಳನ್ನು ನೀಡಿ ಓದುವಂತೆ ಪ್ರೋತ್ಸಾಹಿಸಿತು. ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ರಜಾ ಅವಧಿಯಲ್ಲೂ ವಿದ್ಯಾರ್ಥಿಗಳಲ್ಲಿ ಕಲಿಕಾಸಕ್ತಿ ಕುಂದದಂತೆ ಪ್ರಕಟಿಸಿತು. ವಿಜ್ಞಾನ ವಿಷಯ ಕಠಿಣ ಎಂಬ ನಿಲುವು ತಾಳಿದ್ದ ವಿದ್ಯಾರ್ಥಿಗಳನ್ನು ಶಿಕ್ಷಣದತ್ತ ಗಮನ ಸೆಳೆಯಲು ಪರೀಕ್ಷೆಗೂ ಮೂರು ತಿಂಗಳ ಮುನ್ನ ಪ್ರತಿ ವಾರ ಪರೀಕ್ಷೆಗೆ ಬರುವ ಸಂಭವನೀಯ ವಿಜ್ಞಾನ ಚಿತ್ರ ಸ್ಪರ್ಧೆ ಏರ್ಪಡಿಸಿ, ಉತ್ತಮ ಚಿತ್ರ ಬಿಡಿಸಿದ ವಿದ್ಯಾರ್ಥಿಗಳ ಭಾವಚಿತ್ರ ಹಾಗೂ ಬಿಡಿಸಿದ ವಿಜ್ಞಾನ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಹಾಗೂ ಶಾಲೆಯ ಅತ್ಯುತ್ತಮ ಚಿತ್ರಬಿಡಿಸಿದ ವಿದ್ಯಾರ್ಥಿಯ ಹೆಸರು, ಮಾರ್ಗದರ್ಶಿ ಶಿಕ್ಷಕರ ಹೆಸರು ಪ್ರಕಟಿಸುವ ಮೂಲಕ ಮಕ್ಕಳನ್ನು ವಿಜ್ಞಾನದತ್ತ ಸೆಳೆಯುವ ಕಾರ್ಯ ನಡೆಯಿತು. ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಅತ್ಯುತ್ತಮ ಚಿತ್ರಗಳನ್ನು ಆಯ್ಕೆ ಮಾಡುವಲ್ಲಿ ಆಯಾ ಶಾಲಾ ಶಿಕ್ಷರಿಗೂ ಕಠಿಣ ಸವಾಲಾಗಿ ಪರಿಣಮಿಸಿತು. 70ಕ್ಕೂ ಅಧಿಕ ಶಾಲೆಯಿಂದ ಶಾಲೆಗೊಂದರಂತೆ ಅತ್ಯುತ್ತಮ ಚಿತ್ರಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಮೂರು ಅತ್ಯುತ್ತುಮವಾದ ಚಿತ್ರಗಳನ್ನು ಪ್ರಕಟಿಸಿದಾಗ ಮಕ್ಕಳಲ್ಲಿ ಹರ್ಷವೋ ಹರ್ಷ. ನಿರಂತರವಾಗಿ ಶಾಲೆಗೆ ಬಾರದ ವಿದ್ಯಾರ್ಥಿಗಳು ಚಿತ್ರಸ್ಪರ್ಧೆಯಲ್ಲಿ ಭಾಗವಹಿಸಲು ಶಾಲೆಗೆ ಬಂದ ನಿದರ್ಶನಗಳಿವೆ. ಅಲ್ಲದೆ ಅದೇ ವಿದ್ಯಾರ್ಥಿ ಉತ್ತಮ ಚಿತ್ರ ಬಿಡಿಸಿ ಆಯ್ಕೆಯಾಗುತ್ತಿರುವುದು ಎಲ್ಲರ ಗಮನ ಸೆಳೆಯುತ್ತಿತ್ತು.

ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಹಕಾರದೊಂದಿಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಳಕ್ಕಾಗಿ ವಿನೂತನ ಯೋಜನೆಗಳನ್ನು ರೂಪಿಸಿ ಅನುಷ್ಠಾನ ಗೊಳಿಸಲಾಯಿತು. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಗೊಂದಲ ನಿವಾರಣೆಗಾಗಿ ಫೋನ್ ಇನ್ ಕಾರ್ಯಕ್ರಮ ನಡೆಸಿ, 14 ಶಿಕ್ಷಕರು ಒಂದು ಗಂಟೆಯಲ್ಲಿ 300ಕ್ಕೂ ಅಧಿಕ ಕರೆಗಳಿಗೆ ಉತ್ತರಿಸಿ ಮಕ್ಕಳ ಸಮಸ್ಯೆ ನಿವಾರಣೆ ಮಾಡಿದರು. ಗೂಗಲ್ ಮೀಟ್ ಮೂಲಕ ವಿದ್ಯಾರ್ಥಿಗಳಿಗೆ ಪರೀಕ್ಷೆ ಕುರಿತು ಹಲವು ಉಪಯುಕ್ತ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿ, ಶಿಕ್ಷಕಕರು ತಿಳಿಸಿದರು. ತಾಲೂಕಿನ ಪ್ರತಿ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಒಂದೇ ಸೂರಿನಡಿ ಎಸ್ಸೆಸ್ಸೆಲ್ಸಿ ವಿಷನ್ 625 ತರಬೇತಿ ನೀಡಲಾಯಿತು. ರಾಜ್ಯಮಟ್ಟದ ಪೂರ್ವಸಿದ್ಧತಾ ಪರೀಕ್ಷೆ ನಂತರ ಆಯ್ದ ವಿದ್ಯಾರ್ಥಿಗಳಿಗೆ ಗ್ಯಾರಂಟಿ 625 ಕಾರ್ಯಾಗಾರದ ಮೂಲಕ ನುರಿತ ತಜ್ಞ ಶಿಕ್ಷಕರಿಂದ ಮಕ್ಕಳ ಗೊಂದಲಗಳನ್ನು ನಿವಾರಣೆ ಮಾಡಿ ಪರೀಕ್ಷೆಗೆ ಆತ್ಮವಿಶ್ವಾಸ ಬಲಪಡಿಸಿತು. ಅಲ್ಲದೆ ವಿಶೇಷ ವಾಟ್ಸಪ್ ಗ್ರೂಪ್ ರಚಿಸಿ ಪರೀಕ್ಷೆಯ ಹಿಂದಿನ ದಿನದವರೆಗೂ ವಿದ್ಯಾರ್ಥಿಗಳ ಕೊನೆಕ್ಷಣದ ಗೊಂದಲಗಳಿಗೂ ಶಿಕ್ಷಕರು ಗ್ರೂಪಿನಲ್ಲಿ ಉತ್ತರಿಸುವ ವಿಶೇಷ ಪ್ರಯತ್ನ ಈ ಭಾರಿ ನಡೆಯಿತು. ಪರೀಕ್ಷೆ ಹಿಂದಿನದಿನದವರೆಗೆ ಪರೀಕ್ಷೆಯ ಸಂಭವನೀಯ ಪಶ್ನೆಗಳನ್ನು ನೀಡಿ ಕಲಿಕೆಯಲ್ಲಿ ತೊಡಗುವಂತೆ ಮಾಡಲಾಯಿತು. ಈ ಬಾರಿ ಎಸೆಸ್ಸೆಲ್ಸಿ ಫಲಿತಾಂಶ 27ನೇ ಸ್ಥಾನದಿಂದ 19ಕ್ಕೆ ಜಿಗಿದಿರುವುದು ಎಲ್ಲರ ಒಗ್ಗಟ್ಟಿನ ಪರಿಶ್ರಮದ ಫಲವಾಗಿದೆ.

ಇಷ್ಟೆಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂ ಸಿಇಒ ಎನ್.ಎಂ.ಅಕ್ರಮ್ ಅಲಿ ಷಾ, ಡಿಡಿಪಿಐ ವೇಂಕಟೇಶ ರಾಮಚಂದ್ರಪ್ಪ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ, ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಕಾರ್ಯಾಲದ ಸಿಬ್ಬಂದಿ, ಇಸಿಒಗಳು, ಜಿಲ್ಲೆಯ ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲೆಯ ಮಾರ್ಗದರ್ಶಿ ಶಿಕ್ಷಕರು ಹಾಗೂ ಸಮಸ್ತ ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು ಸಹಕರಿಸಿ ಕೈಜೋಡಿಸಿದ್ದಾರೆ. ಫಲಿತಾಂಶ ಪ್ರಗತಿಗೆ ಹಂಪಿ ಟೈಮ್ಸ್‌ನೊಂದಿಗೆ ಸಹಕರಿಸಿದ ಸರ್ವರಿಗೂ ಹಾಗೂ ಪತ್ರಿಕೆಯ ಕಾರ್ಯವನ್ನು ಜಿಲ್ಲೆ ಸೇರಿದಂತೆ ನಾಡಿನ ವಿವಿಧ ಜಿಲ್ಲೆಗಳಿಂದಲು ಹರ್ಷ ವ್ಯಕ್ತಪಡಿಸಿದ ಎಲ್ಲರಿಗೂ ಹಂಪಿ ಟೈಮ್ಸ್ ಬಳಗ ಧನ್ಯವಾದಗಳೊಂದಿಗೆ ಅಭಿನಂದನೆ ಸಲ್ಲಿಸುತ್ತದೆ.

ವಿಜಯನಗರ ಜಿಲ್ಲೆ ಮುಂದಿನ ವರ್ಷದ ಎಸ್ಸೆಸ್ಸೆಲ್ಸಿ ಫಲಿತಾಶ ಮತ್ತಷ್ಟು ಉನ್ನತ ಸ್ಥಾನಕ್ಕೇರಲು ಜಿಲ್ಲಾಡಳಿತ, ಶಿಕ್ಷಣ ಇಲಾಖೆ ಮತ್ತು ಶಿಕ್ಷಕರು ಹಾಗೂ ಶಿಕ್ಷಣ ಪ್ರೇಮಿಗಳು, ಪಾಲಕರ ಸಹಕಾರ ಅಗತ್ಯವಿದೆ. ಶೈಕ್ಷಣಿಕ ವರ್ಷದ ಆರಂಭದಿಂದಲೇ ನಿರೀಕ್ಷಿತ ಗುರಿ ತಲುಪಲು ಎಲ್ಲರೂ ಒಗ್ಗಟ್ಟಿನೊಂದಿಗೆ ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಉತ್ತಮ ಫಲಿತಾಂಶ ನಮ್ಮದೆ ಎನ್ನುವ ಸಂಶಯವಿಲ್ಲ. ನಿಮ್ಮ ಪ್ರೋತ್ಸಾಹ ಬೆಂಬಲವೆ ನಮಗೆ ಬಲ.

– **ಸಂಪಾದಕ**

## 2023-24ನೇ ಸಾಲಿನಲ್ಲಿ
# 27 ನೇ ಸ್ಥಾನ

**ಮಕ್ಕಳು ಅರಸರಾಗಬೇಕೆ?**

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

**REQUIRED**

Are you passionate about creativity, branding and making ideas come alive?
We're looking for dynamic individuals to join our Advertising & Marketing Team!

**POSITION**

- Advertising Manager
- Ad Sales Executive

**LOCATION**

Vijayanagara Dist.

Who can Apply:

- MBA/BBA in Marketing, Mass Communication, related fields
- Experience in media ad sales or Marketing preferred
- Freshers with strong passion for advertising are welcome too!

Submit Your CV and Portofolio :

96866 63125

**ನಿಮ್ಮ ಬೆಂಬಲವೇ ಪತ್ರಿಕೆಯ ಸ್ವತಂತ್ರತೆಗೆ ಬಲ**

ಮುದ್ರಣ ಮಾಧ್ಯಮವು ಸಮಾಜದಲ್ಲಿ ಅರಿವು, ಚಿಂತನೆ ಮತ್ತು ಪ್ರಜ್ಞೆ ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ನಾವು ನಿಮಗಾಗಿ ಪ್ರತಿದಿನದ ನಿಖರ ಮತ್ತು ನಿಸ್ಪಕ್ಷಪಾತ ವರದಿ ಮತ್ತು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮೌಲ್ಯಯುತ ಲೇಖನಗಳನ್ನು ಹಂಚಿಕೊಳ್ಳುತ್ತಿದ್ದೇವೆ. ಮುದ್ರಣ ಮಾಧ್ಯಮದ ಉಳಿವು ಒಂದು ಸಾಮೂಹಿಕ ಜವಾಬ್ದಾರಿಯಾಗಿದೆ. ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆಯನ್ನು ಅಭಿವೃದ್ಧಿಪಡಿಸಬೇಕಾದರೆ, ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈಜೋಡಿಸಬೇಕಿದೆ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂ ನಿರೀಕ್ಷಿಸಲಾಗದು. ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ನಿಮ್ಮ ಬೆಂಬಲವೇ ನಮ್ಮ ಕಾಯಕಕ್ಕೆ ಬಲ.

**ಹಂಪಿ ಟೈಮ್ಸ್, ಹೊಸಪೇಟೆ : ಮೊ: 9448633038**

**ನೀವೂ ಬರೆಯಬಹುದು**

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಗುರುವಿನ ಕರುಣೆ ಅರಿವಿನ ಬೆಳಗು

ಮಾನವನ ಉನ್ನತಿಯಲ್ಲಿ ಗುರುವಿನ ಪಾತ್ರ ಅನುಪಮವಾದುದು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ವಿದ್ಯಾದಾನ ಮಾಡುವ ಗುರುವಿನ ಮನಸ್ಸು ನಿರ್ಮಲವಾದುದು, ಹೃದಯ ವಿಶಾಲವಾದುದು. ಗುರುವಿನ ಕರುಣೆಯ ಗಂಗಾಜಲದಲ್ಲಿ ಮಿಂದವರು ಪಾವನರಾಗುತ್ತಾರೆ. ಇದು ವೇದಕಾಲದ ಮಾತು ಹೇಗೋ ಹಾಗೆಯೇ ಈಗಿನ ಚಂದ್ರಯಾನ, ಸೂಯ9ಯಾನದ ಕಾಲದ ಮಾತೂ ಹೌದು. ಆದ್ದರಿಂದಲೇ " ನಗುರೋರಧಿಕಂ" ಎಂಬ ಮಾತು ಎಂದಿಗೂ ಅಜರಾಮರ. ಗುರುಗಳಿಗೂ ಜ್ಞಾನಾಮೃತವನ್ನು ನೀಡಿದ ಗುರುಗಳು ಇರುತ್ತಾರೆ ಎಂಬುದನ್ನು ನಾವಿಂದಿಗೂ ಮರೆಯಬಾರದು. ಈಗಿನ ಅತ್ಯುನ್ನತ ಎಂದು ಭಾವಿಸುವ ಶ್ರೇಷ್ಠ ಶಿಕ್ಷಕವರ್ಗದವರು ತಮ್ಮ ಗುರುಗಳ ಸ್ಮರಣೆಗೆ ಜಾರಿದಾಕ್ಷಣ ಭಾವುಕರಾಗುವುದು, ಕಂಬನಿಗರೆಯುವುದನ್ನೂ ನಾವು ನೋಡಿದ್ದೇವೆ. ಉಪಾಧ್ಯಾಯ ವೃತ್ತಿಯಲ್ಲಿರುವವರು ತಮ್ಮ ಗುರುಸ್ಮರಣೆಯ ಕಾರ್ಯವನ್ನು ಪೂಜೆಯಂತೆ ಮಾಡಬೇಕು. ಹಾಗಾದರೆ ಮಾತ್ರ ಮುಂದಿನ ಪೀಳಿಗೆಗೆ ಅವರು ಗುರುವಿನ ಮಹತ್ವವನ್ನು ಸಮರ್ಥವಾಗಿ ದಾಟಿಸಲು ಸಾಧ್ಯವಾಗುತ್ತದೆ.

ಪುರಾತನ ಭಾರತದಲ್ಲಿ ಗುರುವನ್ನು ದೈವಕ್ಕೆ ಸಮಾನ ಎಂದು ಭಾವಿಸಿದ್ದರು. ಇದು ಕೇವಲ ಭಾವುಕ ಮನಸ್ಸಿನ ಪ್ರತಿಬಿಂಬವಲ್ಲ. ಅತ್ಯುನ್ನತ ಚುರುಕು, ಬುದ್ಧಿಯ ವಿಮರ್ಶಾಪ್ರಜ್ಞೆ, ಉಪನಿಷತ್ ದೃಷ್ಟಾರರು ನುಡಿದ ಅಮೃತ ಫಲಗಳು. ಋಷಿ ಆಶ್ರಮ ಎಂದು ಕರೆಯಲ್ಪಡುತ್ತಿದ್ದ ವಿದ್ಯಾಕೇಂದ್ರಗಳಲ್ಲಿ ಮೌಖಿಕ ಪರಂಪರೆಯ ವಿದ್ಯೆ ಸಾವಿರಾರು ವರ್ಷಗಳ ಕಾಲ ಹಾಗೆಯೇ ಹರಿದು ಬಂದು ಯಾವುದೋ ಕಾಲದಲ್ಲಿ ಲಿಪಿಯಲ್ಲಿ ಮೂಡಿ ಸ್ಥಿರವಾಯಿತು. ಅದನ್ನು ಅವುಗಳ ಮೂಲ ಸ್ವರೂಪದಲ್ಲಿ ಉಳಿಸಲು, ತಮ್ಮ ಪ್ರಿಯಶಿಷ್ಯರ ಮೂಲಕ ಮುಂದುವರಿಸಲು ಪ್ರಯತ್ನಿಸಿ ಸಫಲರಾದ ಆ ಗುರುಗಳ ಪರಿಶ್ರಮ, ಜ್ಞಾನಪ್ರೀತಿ ಅನುಪಮವಾದದ್ದು, ಅಮೋಘವಾದದ್ದು. ಯಾವುದೇ ಸೌಲಭ್ಯ ಅನುಕೂಲ, ದ್ರವ್ಯದಾಸೆ ಇಲ್ಲದೆ, ಕೀರ್ತಿಶನಿಯ ಬಯಕೆಯಿಂದ ದೂರವಾಗಿ ತಮ್ಮ ಪ್ರಿಯ ವಿದ್ಯಾಥಿ9ಗಳ ಏಳಿಗೆಯೊಂದನ್ನೇ ವ್ರತದಂತೆ ಮಾಡಿ ಗುರು ಶಿಷ್ಯ ಪರಂಪರೆಗೆ ಅರ್ಥ ತಂದುಕೊಟ್ಟರು. ಅಗೋಚರರೂ, ಅಪೂವ9ವೂ ಆದ ಆ ಪೂರ್ವಸೂರಿಗಳನ್ನು ನಾವಿಂದು ಕೃತಜ್ಞತೆಯಿಂದ ಸ್ಮರಿಸಬೇಕು. ಆ ದಿವ್ಯಾತ್ಮಗಳಿಗೆ ಇಲ್ಲಿಂದಲೇ ನಮಿಸಬೇಕು.

ಪ್ರಾಚೀನ ಭಾರತದಲ್ಲಿ ಶಿಕ್ಷಣವು ಎಲ್ಲರಿಗೂ ದೊರೆಯುಲಿಲ್ಲ ಎನ್ನುವುದು ಸತ್ಯ. ಕೆಲವು ಉದಾಹರಣೆಗಳನ್ನು ಹೊರತುಪಡಿಸಿದರೆ ಮಹಿಳೆಯರೂ ಇದರಿಂದ ದೂರವೇ ಉಳಿದರು, ಅಥವಾ ಉಳಿಸಲಾಯಿತು. ಕಳೆದ ನೂರು ವರ್ಷಗಳಲ್ಲಿ ವಿಶ್ವದಲ್ಲಿ ನಡೆದ ಅನೇಕ ಹೋರಾಟಗಳು ಹಾಗೂ ಅವುಗಳಿಂದ ಮೂಡಿದ ಅರಿವಿನ ಫಲವಾಗಿ ಭಾರತದಲ್ಲೂ ಶಿಕ್ಷಣ ಕ್ರಾಂತಿಯಾದುದನ್ನು ಕಂಡಿದ್ದೇವೆ. ಇಲ್ಲಿಯೂ ಗುರುವೇ ಶಿಕ್ಷಣದ ಕೇಂದ್ರ ಬಿಂದುವಾಗಿ ಮುಂದು ವರಿದು ಪರಂಪರೆ ಮುಂದು ವರೆಯಿತು. ಆಧುನಿಕ ಭಾರತದ ಶಿಕ್ಷಣ ಪದ್ಧತಿ ಎಷ್ಟೇ ಬದಲಾವಣೆ ಗೊಳಪಟ್ಟು ಹೊಸ ಬೋಧನಾ ಕ್ರಮ, ವಿಷಯಗಳ ವೈವಿಧ್ಯತೆ, ಆಧುನಿಕ ತಂತ್ರಜ್ಞಾನ, ತಾಂತ್ರಿಕ ಸಲಕರಣೆಗಳ ಮೂಲಕ ಕಲಿಯುವ ವಿಧಾನ, ಎಲ್ಲವೂ ನಾವೀನ್ಯತೆ ಪಡೆದರೂ ಗುರುವಿನ ಸ್ಥಾನ ಇಂದಿಗೂ ಕಿಂಚಿತ್ತೂ ಬದಲಾಗಿಲ್ಲ. ಇದು ಭಾರತದ ಮಣ್ಣಿನ ಗುಣವೇ ಆಗಿದೆ. ಪಠ್ಯಕ್ರಮದ ಮೂಲಕ ವಿದ್ಯಾ ಮಂದಿರ ಗಳಲ್ಲಿ ಕಲಿಯುವ ವಿದ್ಯೆಗಿಂತ, ಲಲಿತ ಕಲೆಗಳಾದ ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿ ರಂಗಗಳಲ್ಲಿ ಗುರುವಿನ ಹೊರತು ಮುನ್ನಡೆಯಲು ಸಾಧ್ಯವೇ ಇಲ್ಲ. ಇದು ಕೇವಲ ಭಕ್ತಿಭಾವದ ನಡೆಯಷ್ಟೇ ಆಗಿರದೆ ವಿದ್ಯಾರ್ಥಿಯ ಅಂತರಂಗ ದಲ್ಲಿ ಮೂಡಿದ ಕೃತಜ್ಞತೆಯ ಸಂಕೇತವಾಗಿದೆ.





ಬಿ.ಎಂ.ರಾಜಶೇಖರ, ಶಿಕ್ಷಕರು
M:9900705323

Scan For Digital Colourful
HAMPI TIMES E-paper

ಅನೇಕ ಸಂದರ್ಭಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಕಲಿಸಿದ ಗುರುಗಳನ್ನು ಹೊರತುಪಡಿಸಿ ಬೇರೆಯ ವರನ್ನೂ ನಾವು ಗುರು ಸಮಾನರಾಗಿ ಭಾವಿಸುವುದುಂಟು. ಸಾಂಪ್ರದಾಯಿಕ ಗುರುಗಳಿಗಿಂತ ಸಾಂದರ್ಭಿಕವಾಗಿ ಗುರುಗಳಾಗಿ ಮಾರ್ಪಟ್ಟ ಇಂತಹವರೇ ನಮ್ಮಿಂದ ಅತಿ ಹೆಚ್ಚಿನ ಗೌರವ ಮಾನ್ಯತೆ ಪಡೆಯುವುದೂ ಉಂಟು. ಇಂತಹ ಸಂಬಂಧಗಳಲ್ಲಿ ನಾವು ಪ್ರಜ್ಞಾಪೂರ್ವಕವಾಗಿ, ಸಾವಧಾನ ವಾಗಿ ಯೋಚಿಸಿ ತೀರ್ಮಾನಕ್ಕೆ ಬಂದು ಒಪ್ಪಿಕೊಂಡಿ ರುತ್ತೇವೆ. ಆಧ್ಯಾತ್ಮಿಕ ಗುರುಗಳನ್ನು ಹೊರತುಪಡಿಸಿಯೂ ಇದು ಸತ್ಯವಾದದು. ಏಕೆಂದರೆ ಇದು ಹೃದಯದಲ್ಲಿ ನೆಲೆಸಿದ ಸಂಬಂಧವಾಗಿರುತ್ತದೆ.

ಸ್ವಾಮಿ ವಿವೇಕಾನಂದರು ಆಧುನಿಕ ಕಾಲದ ಇಂಗ್ಲಿಷ್ ಶಿಕ್ಷಣವನ್ನು ಪಡೆದ ಮೇಧಾವಿಗಳಾಗಿದ್ದರು. ಆದರೆ ಅವರು ಗುರು ಎಂದು ಸ್ವೀಕರಿಸಿದ್ದು ಶಾಲಾ ಶಿಕ್ಷಣವನ್ನು ಕಡಿಮೆ ಪಡೆದಿದ್ದ ರಾಮಕೃಷ್ಣ ಪರಮಹಂಸರನ್ನು. ಪರಮಹಂಸರ ಅಧ್ಯಾತ್ಮಜ್ಞಾನ, ದೈವತ್ವಗಳು ವಿವೇಕಾನಂದರು ಶಿಷ್ಯರಾಗಲು ಕಾರಣವಾದವು. ಬಸವಣ್ಣ, ಕಾಳಿದಾಸ, ವಾಲ್ಮೀಕಿ, ವ್ಯಾಸರನ್ನು ಗುರು ಎಂದು ಕಾಲಾನಂತರದಲ್ಲಿ ಸ್ವೀಕರಿಸಿದವರೇ ಹೆಚ್ಚು. ನಮ್ಮ ಕಾಲದಲ್ಲಿ ನಮ್ಮ ಸುತ್ತ ಇರುವ ಅನೇಕ ಪ್ರತಿಭಾವಂತರನ್ನು, ಒಳ್ಳೆಯ ಮನಸು, ಹೃದಯ ಉಳ್ಳವರನ್ನು ಗುರುಸ್ಥಾನದಲ್ಲಿ ಇರಿಸಿ ಗೌರವಿಸುವುದೂ ಸರಿಯಾದ ಕ್ರಮವೇ ಆಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಉಪಾಧ್ಯಾಯರಾಗಿ ದುಡಿಯುತ್ತಿರುವ ಇಂದಿನ ಬಹಳಷ್ಟು ಶಿಕ್ಷಕರು ತಮ್ಮನ್ನು ತಿದ್ದಿ ತೀಡಿ ಮಾರ್ಗದರ್ಶನವಿತ್ತ, ತಾಯಿಯಂತೆ ಪ್ರೀತಿಸಿ ವಿದ್ಯೆ ನೀಡಿದ ಗುರುಗಳನ್ನು ಸದಾ ಸ್ಮರಿಸುತ್ತಲೇ ಇರುತ್ತಾರೆ. ಇದು ಅಪೇಕ್ಷಣೀಯ ಕೂಡಾ ಹೌದು. ಇದು ಪರಂಪರೆಯಾಗಿ ನಮ್ಮಲ್ಲಿ ಬೆಳೆದು ಬಂದಿದೆ, ಬರಬೇಕು ಕೂಡಾ. ಹಾಗೆಯೇ ಇದು ಮುಂದುವರೆಯಬೇಕು. ಗುರು ಶಿಷ್ಯ ಬಾಂಧವ್ಯವನ್ನು ದೈವೀ ನೆಲೆಯಿಂದ ಹೊರತುಪಡಿಸಿ ನೋಡಿದರೂ ಕೂಡಾ ಇದೊಂದು ಪವಿತ್ರ ಬಾಂಧವ್ಯವಾಗಿದೆ. ಗುರುವು ತೋರಿಸುವ ಪ್ರೀತಿ, ಮಮತೆ, ಸಮರ್ಪಣಾ ಭಾವ, ವಿದ್ಯಾರ್ಥಿಗಳ ಅಭ್ಯುದಯವನ್ನು ಕಂಡು ಸಂತಸಪಡುವ ಮನೋಭಾವ ಇವೆಲ್ಲವೂ ಈ ಬಾಂಧವ್ಯದ ಬಂಧವನ್ನು ವೃದ್ಧಿಪಡಿಸುವ ಉಪಕರಣಗಳೇ ಆಗಿವೆ. ಇತ್ತೀಚಿನ ದಿನಗಳಲ್ಲಿ ಶಾಲಾ ಕಾಲೇಜುಗಳಲ್ಲಿ "ಗುರುವಂದನೆ" ಎಂಬ ವಿನೂತನ ಕಾರ್ಯಕ್ರಮಗಳನ್ನು ನಡೆಸುವುದನ್ನು ನೋಡುತ್ತಿದ್ದೇವೆ. ತಮಗೆ ಪಾಠ ಹೇಳಿದ ಪ್ರೀತಿಯ ಗುರುಗಳನ್ನು ಕಂಡು ಮಾತನಾಡಿಸಿ ಅವರಿರುವಾಗಲೇ ಅವರನ್ನು ಗೌರವಿಸಿ ಕೃತಜ್ಞತೆ ಸಲ್ಲಿಸುವ ಈ ಕ್ರಿಯಾವಿಧಾನ ಸ್ತುತ್ಯರ್ಹವಾದುದು. ಇಳಿವಯಸ್ಸಿನ ಗುರುಗಳಿಗೆ ಇವುಗಳು ಧನ್ಯತೆಯನ್ನೂ, ಸಮಾಧಾನವನ್ನೂ ತಂದುಕೊಡುವ ಘಟನೆಗಳಾಗಿ ನೆನಪಿನಲ್ಲಿ ಉಳಿಯುತ್ತವೆ.

ಬದಲಾಗಿರುವ ಹಾಗೂ ಬದಲಾಗುತ್ತಿರುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಕರೂ ಗುಣಾತ್ಮಕವಾಗಿ ಬದಲಾಗಬೇಕಾದ ಅನಿವಾರ್ಯತೆ ಇದೆ. ತಂತ್ರಜ್ಞಾನ ಆಧಾರಿತ ಭೋಧನಾ ವಿಧಾನಗಳಿಗೆ ತೆರೆದು ಕೊಳ್ಳಬೇಕಾಗಿದೆ. ಇಲ್ಲವಾದರೆ ಪ್ರವಾಹದಿಂದ ಹೊರಗುಳಿಯಬೇಕಾಗುತ್ತದೆ. ಅತ್ಯಂತ ವೇಗದ ಆಧುನಿಕ, ವೈಜ್ಞಾನಿಕ ಜಗತ್ತಿಗೆ ಶಿಕ್ಷಕರು ಹೊಂದಿಕೊಳ್ಳುವ ಅಗತ್ಯ ಹಿಂದಿಗಿಂತ ಇಂದು ಹೆಚ್ಚಾಗಿದೆ.

ರಾಮಾಯಣ, ಮಹಾಭಾರತಗಳನ್ನು ಒಳಗೊಂಡಂತೆ ಭಾರತೀಯ ಸಾಹಿತ್ಯದಲ್ಲಿನ ಅಸಂಖ್ಯ ಪಾತ್ರಗಳು, ಕಥೆಗಳು ಪುರಾತನ ಕಾಲದಿಂದ ನಮ್ಮನ್ನು, ನಮ್ಮ ಸಮಾಜವನ್ನು ಸರಿದಾರಿಯಲ್ಲಿ ಸಾಗುವಂತೆ ಬುದ್ಧಿ ಹೇಳುತ್ತಲೇ ಇವೆ. ರಾಮ, ಹರಿಶ್ಚಂದ್ರ, ಭಗೀರಥ, ಶ್ರವಣ ಕುಮಾರ, ಯುಧಿಷ್ಠಿರ, ವಿದುರ, ಕೃಷ್ಣ ಹೀಗೆ ಅಸಂಖ್ಯ ಪಾತ್ರಗಳು ನಮಗೆ ಇಂದು ಕೇವಲ ಪಾತ್ರಗಳಾಗಿ ಉಳಿದಿಲ್ಲ. ಪಂಚತಂತ್ರ, ಭಗವದ್ಗೀತೆ, ನಾಟ್ಯಶಾಸ್ತ್ರ, ಅರ್ಥಶಾಸ್ತ್ರ ಹೀಗೆ ಅಸಂಖ್ಯ ಕೃತಿಗಳು ಕೇವಲ ಸಾಹಿತ್ಯ ಕೃತಿಗಳಾಗಿ ಉಳಿದಿಲ್ಲ. ಇವೆಲ್ಲ ಗುರುಸ್ಥಾನದಲ್ಲಿ ನಿಂತು ಇಡೀ ಮಾನವ ಕುಲವನ್ನೇ ಪೊರೆಯುತ್ತಿವೆ. ವಚನಕಾರರು, ದಾಸರು, ಸಂತರು ವಿಜ್ಞಾನಿಗಳು, ಸಮಾಜ ಸುಧಾರಕರು ನಾನಾ ಬಗೆಯಲ್ಲಿ ನಮ್ಮ ಬದುಕನ್ನು ಸರಿಪಡಿಸಿಕೊಳ್ಳಲು ನೆರವಾಗುತ್ತಿದ್ದಾರೆ. ಒಟ್ಟಾರೆ ನಮ್ಮ ಪುರಾಣ, ಇತಿಹಾಸ, ಆಧುನಿಕ ಪುಣ್ಯಪುರುಷರು ದೂರದಿಂದಲೇ ತಮ್ಮ ಬದುಕಿನ ರೀತಿಯಿಂದಲೇ ಗುರುಗಳಾಗಿ ನಮ್ಮನ್ನು ತಿದ್ದುತ್ತಿದ್ದಾರೆ. ತಿದ್ದಿಕೊಳ್ಳಲು ನಾವು ಸಿದ್ಧರಿರಬೇಕು ಅಷ್ಟೇ.

# ಪ್ರಭಾವಿಸಲಿರುವ ರೋಬೋಟಿಕ್ ಶ್ವಾನಗಳು

**ರಾಜು. ಭೂಶೆಟ್ಟಿ ಹುಬ್ಬಳ್ಳಿ**



ಸಾಕು ಪ್ರಾಣಿಗಳಲ್ಲಿ ಅತ್ಯಂತ ಜನಪ್ರಿಯ ಪ್ರಾಣಿ ಎಂದರೆ ಅದು ನಾಯಿ ಎಂದು ಹೇಳುತ್ತೇವೆ. ಇದು ಬಹಳಷ್ಟು ಜನರು ಇಷ್ಟ ಪಡುವ ಪ್ರಾಣಿಯಾಗಿದೆ. ಇದಕ್ಕೆ ಮುಖ್ಯ ಕಾರಣ ಅದರ ವಿಶ್ವಾಸಾರ್ಹತೆಯೂ ಕೂಡ ಒಂದಾಗಿದೆ. ಏಕೆಂದರೆ ಅದು ಸಾಕಿದ ಮನೆಯನ್ನು ನಿಯತ್ತಾಗಿ ಕಾಯುತ್ತದೆ, ಮಾಲಿಕನಿಗೆ ಎಂದೂ ಮೋಸ ಮಾಡುವುದಿಲ್ಲ. ಅಷ್ಟೇ ಅಲ್ಲ! ಹಲವಾರು ಯುದ್ಧಗಳಲ್ಲಿಯೂ ಅದ್ಭುತವಾದ ಸೇವೆಯನ್ನು ನಾಯಿಗಳು ಒದಗಿಸಿರುವ ಇತಿಹಾಸವೂ ಇದೆ. ಅಪಾಯದಲ್ಲಿರುವ ಜನರನ್ನು ರಕ್ಷಿಸಲು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುವ ಅವುಗಳ ಕಾರ್ಯಗಳು ಮಾತ್ರ ಅತ್ಯದ್ಭುತವಾಗಿದೆ. ಇಂತಹುದೇ ನಾಯಿಯನ್ನು ಕೃತಕವಾಗಿ ನಿರ್ಮಿಸಬಹುದೇ? ನಿರ್ಮಿಸಿದರೆ ಏನಾಗಬಹುದು? ಎಂದು ಯೋಚಿಸಬಲ್ಲಿರಾ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರವೆಂದರೆ ನಾಯಿಯನ್ನೇ ಹೋಲುವ ಕೃತಕ ನಾಯಿಯನ್ನು ಈಗಾಗಲೇ ನಿರ್ಮಿಸಲಾಗಿದ್ದು ಅದನ್ನು ರೋಬೋಟಿಕ್ ಶ್ವಾನಗಳು ಎಂದು ಕರೆಯುವರು. ಈ ರೋಬೋಟಿಕ್ ಶ್ವಾನಗಳು ರಿಮೋಟ್‌ನಿಂದ ನಿರ್ವಹಿಸಲ್ಪಡುತ್ತವೆ. ಮುಖ್ಯವಾಗಿ ಜಿಪಿಎಸ್ ಮತ್ತು ಕೃತಕ ಬುದ್ಧಿಮತ್ತೆಯ ಸಹಾಯದಿಂದ ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸುತ್ತದೆ. ಇವುಗಳು ಸಾಕಷ್ಟು ಶಕ್ತಿ, ಸಾಮರ್ಥ್ಯವನ್ನು ಹೊಂದಿದ್ದು, ಸುಮಾರು 180 ರಿಂದ 200 ಕಿಲೋಗ್ರಾಂಗಳವರೆಗೆ ವಸ್ತುಗಳನ್ನು ಸಾಗಿಸಬಲ್ಲವು. ವಿಶ್ವದ ಅತ್ಯಂತ ಕಠಿಣ ಮರುಭೂಮಿ ಪ್ರದೇಶಗಳು, ದಟ್ಟವಾದ ಅರಣ್ಯ ಪ್ರದೇಶಗಳು, ನಿರಂತರವಾಗಿ ಮಂಜುಗಡ್ಡೆಬೀಳುವಪ್ರದೇಶಗಳಲ್ಲಿಮನುಷ್ಯಕಾರ್ಯನಿರ್ವಹಿಸುವುದು ಸಾಧ್ಯವೇ? ಎಂದು ಪ್ರಶ್ನಿಸಿದಾಗ ಅದು ಕಲ್ಪನೆಗೂ ನಿಲುಕದ್ದು ಎಂದು ಹೇಳಬಹುದು. ಬರೀ ನೆನಪಿಸಿಕೊಂಡರು ಕೂಡ ಮೈ ಜುಮ್ಮೆನಿಸುತ್ತದೆ. ಆದರೆ ಅಂತಹ ಅತ್ಯಂತ ಮೈಕೊರೆಯುವ ಚಳಿಯ ಪ್ರದೇಶ ಅಂದರೆ ಸುಮಾರು ಮೈನಸ್ 40 ಡಿಗ್ರಿ ತಾಪಮಾನದಲ್ಲಿಯೂ ರೋಬೋಟಿಕ್ ಶ್ವಾನಗಳು ಕಾರ್ಯನಿರ್ವಹಿಸಬಲ್ಲವು. ಯಾವ ಸ್ಥಳಗಳು ಮಾನವನು ಕಾರ್ಯನಿರ್ವಹಿಸಲು ಸವಾಲಾಗಿವೆಯೋ ಅಂತಹ ದುರ್ಗಮ ಪ್ರದೇಶಗಳಲ್ಲಿಯೂ ಕೂಡ ಯಶಸ್ವಿಯಾಗಿ ಕಾರ್ಯನಿರ್ವಹಿಸಬಲ್ಲವು.

ಈ ರೋಬೋಟಿಕ್ ಶ್ವಾನಗಳಲ್ಲಿರುವ ಥರ್ಮಲ್ ಕ್ಯಾಮೆರಾಗಳು ಪರ್ವತ ಪ್ರದೇಶ, ಗಡಿ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಬಲ್ಲವು.

ಇನ್ನೊಂದು ಮಹತ್ವದ ಸಂಗತಿಯೆಂದರೆ ಇತ್ತೀಚಿಗೆ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ ನೆಲಸಮಗೊಂಡ ಕಟ್ಟಡಗಳನ್ನು ಪ್ರವೇಶಿಸಲು ಕೂಡ ಈ ರೋಬೋಟಿಕ್ ಶ್ವಾನಗಳನ್ನು ಬಳಸಲಾಗಿದೆ. ಅಂದರೆ ಇದೇ ಮೊದಲ ಬಾರಿಗೆ ರಕ್ಷಣಾ ಕಾರ್ಯಚರಣೆಯಲ್ಲಿ ಈ ಶ್ವಾನಗಳನ್ನು ಬಳಸಿರುವುದು ವಿಶೇಷವಾಗಿದೆ. ಪೈಪ್‌ಲೈನ್‌ಗಳು, ತೈಲಬಾವಿ ಮತ್ತು ವಿದ್ಯುತ್ ಮಾರ್ಗಗಳಂತಹ ಮೂಲ ಸೌಕರ್ಯಗಳನ್ನು ಪರಿಶೀಲಿಸಲು, ನಿರ್ಮಾಣ ಸ್ಥಳಗಳ ಮೇಲ್ವಿಚಾರಣೆ ಮಾಡಲು ಮತ್ತು ಕಾರ್ಖಾನೆಗಳಲ್ಲಿ ನಿಯಮಿತ ತಪಾಸಣೆ ನಡೆಸಲು ರೋಬೋಟಿಕ್ ಶ್ವಾನಗಳನ್ನು ಬಳಸಲಾಗುತ್ತದೆ. ತುರ್ತು ಸಂದರ್ಭಗಳಲ್ಲಿ ಅವಶೇಷಗಳು, ಭಗ್ನಾವಶೇಷಗಳ ಮೂಲಕ ಸಂಚರಿಸಿ ಬದುಕುಳಿದವರನ್ನು ಪತ್ತೆ ಹಚ್ಚಲು ಸಹಾಯ ಮಾಡುವ ಮೂಲಕ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಸವಾಲುಗಳನ್ನು ಕಡಿಮೆಗೊಳಿಸಲು ನಿರ್ಣಾಯಕವಾಗಿವೆ. ಗೋದಾಮು ಅಥವಾ ಹೊರಾಂಗಣ ಪರಿಸರದಲ್ಲಿ ಸರಕುಗಳನ್ನು ಸಾಗಿಸಲು ಬಳಸಲಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಬೆಳೆಗಳ ಮೇಲ್ವಿಚಾರಣೆ, ಜಾನುವಾರುಗಳಿಗೆ ಮೇಯಿಸುವುದು, ನಾಟಿ, ಕೊಯ್ಲಿಗೆ ಸಹಾಯ ಮಾಡಲು ಬಳಸಬಹುದು. ಗಣಿಗಾರಿಕೆ ಉದ್ಯಮದಲ್ಲಿ ಅವುಗಳನ್ನು ಭೂಗತ ಪ್ರದೇಶಗಳನ್ನು ಅನ್ವೇಷಿಸಲು ಮತ್ತು ಹೊಸ ಸಂಪನ್ಮೂಲಗಳ ನಕ್ಷೆ ಮಾಡಲು ಬಳಸಬಹುದು.



ಗಡಿ ಭದ್ರತೆಗಾಗಿ, ಮಿಲಿಟರಿಯಲ್ಲಿ ಸೈನಿಕರಿಗೆ ಉಪಕರಣಗಳನ್ನು ಹೊತ್ತುಕೊಂಡುಹೋಗಲು,ಕಾವಲುಗಾರರಾಗಿಕಾರ್ಯನಿರ್ವಹಿಸುವ ಮೂಲಕ ಸಹಾಯಕವಾಗಬಲ್ಲದು. ರೋಗಿಗಳ ಪ್ರಮುಖ ಚಿಹ್ನೆಗಳನ್ನು ಮೇಲ್ವಿಚಾರಣೆ ಮಾಡುವುದು, ಔಷಧಿಗಳನ್ನು ತಲುಪಿಸುವುದು ಮತ್ತು ಭಾವನಾತ್ಮಕ ಬೆಂಬಲವನ್ನು ಒದಗಿಸುವಂತಹ ಕಾರ್ಯಗಳಿಗಾಗಿ ಆಸ್ಪತ್ರೆಗಳಲ್ಲಿ ಬಳಸಬಹುದು. ಹೊಸ ತಂತ್ರಜ್ಞಾನಗಳನ್ನು ಪರೀಕ್ಷಿಸಲು ಮತ್ತು ರೊಬೊಟಿಕ್ಸನ ಸಾಧ್ಯತೆಗಳನ್ನು ಅನ್ವೇಷಿಸಲು ಸಂಶೋಧನಾ ಪ್ರಯೋಗಾಲಯಗಳಲ್ಲಿಯೂ ಬಳಸಬಹುದು. ಇವುಗಳು ನಿರಂತರ ಮಾನವ ಮೇಲ್ವಿಚಾರಣೆಯಿಲ್ಲದೆ ಕಾರ್ಯನಿರ್ವಹಿಸಬಲ್ಲವು. ಇವುಗಳನ್ನು ಕೆಮೆರಾ, ಥರ್ಮಲ್ ಇಮೇಜರ್, ಮೈಕ್ರೋಫೋನ್ ಸೇರಿದಂತೆ ವಿವಿಧ ಸಂವೇದಕಗಳೊಂದಿಗೆ ಸಜ್ಜುಗೊಳಿಸಬಹುದು. ಇದರಿಂದ ಪರಿಸರದಿಂದ ಅಮೂಲ್ಯವಾದ ಡೇಟಾ (ದತ್ತಾಂಶ) ಸಂಗ್ರಹಿಸಲು ಅನುವು ಮಾಡಿಕೊಡುತ್ತದೆ. ಕೆಲವು ಸಂದರ್ಭಗಳಲ್ಲಿ ಕೆಲವು ಕಾರ್ಯಗಳಿಗೆ ಮಾನವ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದಕ್ಕಿಂತರೋಬೋಟಿಕ್ ಶ್ವಾನಗಳನ್ನು ಬಳಸುವುದರಿಂದ ಹೆಚ್ಚು ವೆಚ್ಚ ಪರಿಣಾಮಕಾರಿ ಪರಿಹಾರ ನೀಡಬಲ್ಲವು. ಅಂದರೆ ಕಡಿಮೆ ವೆಚ್ಚ ಮತ್ತು ಸಮಯದಲ್ಲಿ ಹೆಚ್ಚು ಗುಣಾತ್ಮಕವಾದ ಕೆಲಸ ಕಾರ್ಯಗಳನ್ನು ಇವು ನಿರ್ವಹಿಸಬಲ್ಲವು. ರೋಬೋಟಿಕ್ ಶ್ವಾನಗಳಿಗೆ ಕೆಲವು ಉದಾಹರಣೆಗಳನ್ನು ನೋಡುವುದಾದರೆ–

ಬೋಸ್ಟನ್ ಡೈನಾಮಿಕ್ಸ ಸ್ಪಾಟ್– ವಿವಿಧ ಕೈಗಾರಿಕಾ ಮತ್ತು ವಾಣಿಜ್ಯ ಅನ್ವಯಿಕಗಳಲ್ಲಿ ಬಳಸಲಾಗುವ ರೋಬೋಟಿಕ್ ಶ್ವಾನವಾಗಿದೆ. ಎನಿಬೋಟಿಕ್ಸ ರೊಬೊವರ್ಸ ರಿಪ್ಲೈ– ಇದು ಕೈಗಾರಿಕಾ ನಿರ್ವಹಣೆಗಾಗಿ ಸ್ವಾಯತ್ ಮೊಬೈಲ್ ರೋಬೋಟ್. ಇದನ್ನು ರೋಬೋಟಿಕ್ ಶ್ವಾನ ಎಂತಲೂ ಕರೆಯುವರು. ಯುನಿಟ್ರೀ ಬಿ–1– ಕೈಗಾರಿಕಾ ತಪಾಸಣೆ ಮತ್ತು ಸಾರ್ವಜನಿಕ ಸುರಕ್ಷತೆಗಾಗಿ ವಿನ್ಯಾಸಗೊಳಿಸಲಾದ ಬಲಿಷ್ಠವಾದ ಚತುರ್ಭುಜ ರೋಬೋಟ್ ಇದಾಗಿದೆ. ಒಟ್ಟಾರೆಯಾಗಿ ಮಾನವ ಕಲ್ಯಾಣಕ್ಕಾಗಿ ರೋಬೋಟಿಕ್ ಶ್ವಾನಗಳು ಸಾಕಷ್ಟು ಕೊಡುಗೆಗಳನ್ನು ಕೊಡಬಲ್ಲ ಸಾಮರ್ಥ್ಯ ಹೊಂದಿದ್ದು, ಅವುಗಳನ್ನು ಸದುದ್ದೇಶಕ್ಕಾಗಿ ಮಾತ್ರ ಬಳಸಲು ಜಗತ್ತು ನಿರ್ಣಯಿಸಬೇಕಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಹಿಂದೂ ಸಂಸ್ಕೃತಿ ಪುನರ್ಜೀವನಕ್ಕೆ ಆದಿ ಶಂಕರಾಚಾರ್ಯರ ಕೊಡುಗೆ ಅಪಾರ

## ಬಳ್ಳಾರಿ– ಕೊಪ್ಪಳ ಜಿಲ್ಲೆಯಲ್ಲಿ ಆದ್ಯ ಗುರು ಶ್ರೀ ಶಂಕರಾಚಾರ್ಯ ಜಯಂತಿ ಆಚರಣೆ



**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಾಚೀನ ಭಾರತೀಯ ಉಪನಿಷತ್ತುಗಳ ತತ್ವಗಳು ಮತ್ತು ಹಿಂದೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲು ಆದಿ ಶಂಕರಾಚಾರ್ಯರ ಕೊಡುಗೆ ಅಪಾರ ಎಂದು ಬಳ್ಳಾರಿ ಮಹಾನಗರ ಪಾಲಿಕೆ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಂಗನಕಲ್ಲು ರಸ್ತೆಯ ಶ್ರೀ ಭಾರತೀತೀರ್ಥ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಲಾದ ಆದ್ಯ ಗುರು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅದ್ವೈತ ವೇದಾಂತ ತತ್ವವನ್ನು ಆದ್ಯತೆ ಮೇಲೆ ಸ್ಥಾಪಿಸಿದರು. ಧರ್ಮದ ಹೆಸರಿನಲ್ಲಿ ಹರಡುತ್ತಿರುವ ವಿವಿಧ ರೀತಿಯ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಕೆಲಸ ಮಾಡಿದವರು. ಇಂದು ಶಂಕರಾಚಾರ್ಯರನ್ನು ಕಾಲಕಾಲಕ್ಕೂ ಪೂಜಿಸಿಕೊಂಡು ಸ್ಮರಿಸಿಕೊಂಡು ಬರಲಾಗಿದೆ ಎಂದು ಹೇಳಿದರು.

ವೇದಬ್ರಹ್ಮ ಶ್ರೀರಾಮ ಸುಬ್ರಹ್ಮಣ್ಯ ಶರ್ಮ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಭಾರತದ ಶ್ರೇಷ್ಠ ಆಧ್ಯಾತ್ಮಿಕ ನಾಯಕರು ಮತ್ತು ತತ್ವಜ್ಞಾನಿಗಳಲ್ಲಿ ಆದಿ ಶಂಕರಾಚಾರ್ಯರು ಒಬ್ಬರು. ಅದ್ವೈತ ವೇದಾಂತದ ಅಡಿಪಾಯವನ್ನು ಹಾಕಿದ ಮತ್ತು ಸಾಂಸ್ಕೃತಿಕ ಮತ್ತು ಧಾರ್ಮಿಕ ಅವನತಿಯ ಸಮಯದಲ್ಲಿ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು ಎಂದು ಹೇಳಿದರು.

ಇಂದಿನ ಕೇರಳದ ಒಂದು ಸಣ್ಣ ಹಳ್ಳಿಯಾದ ಕಾಲಡಿಯಲ್ಲಿ ಜನಿಸಿದ ಆದಿ ಶಂಕರಾಚಾರ್ಯರು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಯಲ್ಲಿ ಒಬ್ಬರೆಂದು ಹೇಳಲಾಗುತ್ತದೆ. ಅವರು ಆಳವಾದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಮೈಲಿಗಲ್ಲುಗಳನ್ನು ಸಾಧಿಸಿದ್ದರು. ಅವರ ಅಲ್ಪಾವಧಿಯ ಜೀವಿತಾವಧಿಯ ಹೊರತಾಗಿಯೂ, ಅವರ ಕೊಡುಗೆಗಳು ಭಾರತದ ಆಧ್ಯಾತ್ಮಿಕ ಮತ್ತು ತಾತ್ವಿಕ ಭೂದೃಶ್ಯದ ಮೇಲೆ ಶಾಶ್ವತವಾದ ಪ್ರಭಾವ ಬೀರಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ರಾಜೇಶ್ವರಿ ಅವರ ತಂಡ ಭಕ್ತಿ ಸಂಗೀತ ನೆರವೇರಿಸಿಕೊಟ್ಟರು.

**ಮೆರವಣಿಗೆ:** ಜಯಂತಿ ಅಂಗವಾಗಿ ಗುರುವಾರ ಸಂಜೆ ನಗರದಲ್ಲಿ ಸಂಭ್ರಮದ ಮೆರವಣಿಗೆ ನಡೆಯಿತು. ಮೆರವಣಿಗೆಯು ನಗರದ ಸತ್ಯನಾರಾಯಣ ಪೇಟೆಯ ವೆಂಕಟೇಶ್ವರ ದೇವಸ್ಥಾನದಿಂದ ಆರಂಭಗೊಂಡು ಇಂದಿರಾ ವೃತ್ತ–ಬೆಂಗಳೂರು ರಸ್ತೆ–ಸಭಾಪತಿ ಬೀದಿ–ಶ್ರೀ ಶೃಂಗೇರಿ ಶಂಕರಮಠದವರಗೆ ಸಾಗಿ ಸಂಪನ್ನಗೊಂಡಿತು. ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳು ಭಾಗವಹಿಸಿ ಮೆರಗು ನೀಡಿದವು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಶೃಂಗೇರಿ ಶಂಕರಮಠದ ಗೌರವ ವ್ಯವಸ್ಥಾಪಕ ಬಿ.ಕೆ.ಬಿ.ಎನ್. ಮೂರ್ತಿ, ಜಿಲ್ಲಾ ಬ್ರಾಹ್ಮಣರ ಒಕ್ಕೂಟದ ಜಿಲ್ಲಾಧ್ಯಕ್ಷ ಪ್ರಕಾಶ್ ರಾವ್, ಅಖಿಲ ಕರ್ನಾಟಕ ಬ್ರಾಹ್ಮಣರ ಒಕ್ಕೂಟ ಮಹಾಸಭಾದ ಜಿಲ್ಲಾಧ್ಯಕ್ಷ ಡಾ.ಶ್ರೀನಾಥ, ನೇತ್ರ ತಜ್ಞ ಡಾ.ಸುಧಾಕರ, ಲೆಕ್ಕಪರಿಶೋಧಕ ಡಾ.ಶ್ರೀಧರ ಮುಖಂಡರಾದ ಪ್ರಭಾಕರ ಶಾಸ್ತ್ರೀ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



**ಹಂಪಿ ಟೈಮ್ಸ್ ಕೊಪ್ಪಳ**

ಹಿಂದೂ ಧರ್ಮದಲ್ಲಿ ಆಚಾರ ವಿಚಾರಗಳು ಹೇಗೆ ಇರಬೇಕು, ನಾವು ಹೇಗೆ ನಮ್ಮ ದಿನನಿತ್ಯದ ಜೀವನದಲ್ಲಿ ನೆಮ್ಮದಿ ಮತ್ತು ಮುಕ್ತಿಯನ್ನ ಕಾಣಬೇಕು ಅನ್ನೋದಕ್ಕೆ ಶಂಕರಾಚಾರ್ಯರ ಆದರ್ಶಗಳು ದಾರಿ ದೀಪವಾಗಿವೆ ಎಂದು ಕೊಪ್ಪಳ ಸಂಸದರಾದ ಕೆ.ರಾಜಶೇಕರ ಬಸವರಾಜ ಹಿಟ್ನಾಳ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಕೋಟೆ ಹತ್ತಿರದ ಶ್ರೀ ಶಂಕರ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಾವು ಶಂಕರಾಚಾರ್ಯರ ಬಗ್ಗೆ ಬಹಳಷ್ಟು ತಿಳಿದುಕೋಳ್ಳ ಬೇಕಾಗಿದೆ, ನಾವು ಎಷ್ಟು ಅವರ ಬಗ್ಗೆ ತಿಳಿದುಕೋಳ್ಳುತ್ತೇವೋ ಅಷ್ಟು ಭಗವಂತನ ಹತ್ತಿರ ಹೋಗಲಿಕ್ಕೆ ಸಾಧ್ಯವಾಗುತ್ತದೆ. ಅಷ್ಟೊಂದು ಮಾರ್ಗದರ್ಶನ ನೀಡಿರುವಂತ ದಾರ್ಶನಿಕರು ಶಂಕರಾಚಾರ್ಯರು. ಇವತ್ತು ಅಂತಹ ಮಹಾನ್ ದಾರ್ಶನಿಕರ ಜಯಂತಿ ಕಾರ್ಯಕ್ರಮಕ್ಕೆ ನನ್ನನ್ನು ಕೂಡ ಕರೆದು ಪ್ರೀತಿಯಿಂದ ಸ್ವಾಗತಿಸಿದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈ ಸಮಾಜದ ಬಹಳಷ್ಟು ಕಾರ್ಯಕ್ರಮಕ್ಕೆ ನಾನು ಬಂದ್ದಿದ್ದೇನೆ, ಈ ಸಮಾಜಕ್ಕೆ ಸಮುದಾಯ ಭವನದ ಬೇಡಿಕೆ ಇತ್ತು, ಅದಕ್ಕೆ ಅನುದಾನ ಕೇಳಿದಾಗ ನಾವು ಖುಷಿಯಿಂದ ಬಿಡುಗಡೆ ಮಾಡಿದ್ದೇವೆ. ಅದಕ್ಕಿಂತ ಖುಷಿ ಅಂದರೆ ಸಮುದಾಯ ಭವನವನ್ನು ಬಹಳ ಸುಂದರವಾಗಿ ನಿರ್ಮಾಣ ಮಾಡಿದ್ದಿರಿ. ಅದು ಬಹಳ ಖುಷಿ ತಂದಿದೆ. ಇವತ್ತಿನ ಈ ಜಯಂತಿ ಕಾರ್ಯಕ್ರಮವು ಆಚರಣೆಗೆ ಮಾತ್ರ ಸೀಮಿತವಾಗದೆ, ಶಂಕರಾಚಾರ್ಯರ ಆದರ್ಶಗಳ ಪ್ರಚಾರದ ಕಾರ್ಯಕ್ರಮವಾಗಬೇಕು. ಇವತ್ತು ನಾವು ಜಗತ್ತಿನಲ್ಲಿ ಬಹಳ ಧರ್ಮಗಳನ್ನು ನೋಡುತ್ತೇವೆ ಎಲ್ಲಾ ಧರ್ಮಗಳು ಒಳ್ಳೇದನ್ನೆ ತಿಳಿಸುತ್ತವೇ, ಆದರೆ ಹಿಂದೂ ಧರ್ಮದವನ್ನು ಯಾಕೆ ಪ್ರೀತಿಸುತ್ತಾರೆ ಅಂದರೆ ನಮ್ಮಲ್ಲಿ ಸಂಬಂಧಗಳಿಗೆ ಹೆಚ್ಚು ಆದ್ಯತೆಯನ್ನು ನೀಡಿದ್ದಾರೆ. ತಂದೆ–ತಾಯಿ ಹೇಗಿರ ಬೇಕು, ಮಕ್ಕಳು ಹೇಗಿರಬೇಕು, ಮಕ್ಕಳಿಗೆ ಯಾವ ರೀತಿ ಸಂಸ್ಕಾರ ಹೇಳಿ ಕೊಡಬೇಕು, ಶಿಕ್ಷಣ ಹೇಗಿರಬೇಕು ಇವೆಲ್ಲವೂ ಬಹಳ ಅರ್ಥಗರ್ಭಿತ ವಾಗಿರುವಂತವು, ಹಾಗಾಗಿ ಇವತ್ತು ಜಗತ್ತಿನಲ್ಲಿ ಎಲ್ಲರೂ ಕೂಡಾ ಹಿಂದೂ ಧರ್ಮವನ್ನ ಪ್ರೀತಿಸುತ್ತಾರೆ ಎಂದರು.

ಜಗತ್ತು ಬಹಳ ವೇಗವಾಗಿ ಬೇಳಿತಾ ಇದೆ, ಜಗತ್ತಿನ ಇತರೆ ಧರ್ಮಗಳು ಬದಲಾವಣೆ ಹೊಂದಿವೆ ಆದರೆ ಹಿಂದೂ ಧರ್ಮದ ಆಚಾರ ವಿಚಾರಗಳು, ಭಜನೆಗಳು, ಪ್ರಾರ್ಥನೆಗಳು, ಎಲ್ಲಾ ಧಾರ್ಮಿಕ ಕಾರ್ಯಗಳು ಇವತ್ತಿಗೂ ಆಚರಣೆಯಲ್ಲಿವೆ. ಮುಂದೆಯೂ ಸಹ ಶಂಕರಾಚಾರ್ಯರ ಆದರ್ಶಗಳನ್ನು ಉಳಿಸಿ ಬೆಳೆಸಲು ನಾವೆಲ್ಲರೂ ಪ್ರಯತ್ನ ಮಾಡೋಣ ಎಂದರು.

ಹರಿಹರದ ನಿವೃತ್ತಿ ಸಂಸ್ಕೃತ ಪ್ರಾಧ್ಯಾಪಕರಾದ ವಿದ್ಯಾನಾಥ ಶಾಸ್ತ್ರೀಯವರು ಶ್ರೀ ಶಂಕರಾಚಾರ್ಯರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕೋಟ್ರೇಶ್ ಮರಬನಲ್ಳಿ, ಶ್ರೀ ಶಂಕರಾಚಾರ್ಯ ಸಮಾಜದ ಮುಖಂಡರಾದ ಡಿ.ವಿ ಜೋಷಿ, ರವಿ ಪುರೋಹಿತ, ರಮೇಶ ಕೆ., ಅಶೋಕ ವಿ., ಕೃಷ್ಣ ವಿ., ವೆಂಕಟೇಶ ವಿ., ಸುರೇಶ್ ಪಿ.ನಾಡಿಗಾರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

**ಮೈಕ್ರೋ ನ್ಯೂಸ್**

## ಇಂದು ಜಿಲ್ಲಾ ಮಟ್ಟದ ಜನ ಸ್ಪಂದನ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**



ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅಧ್ಯಕ್ಷತೆಯಲ್ಲಿ ಮೇ.3 ರಂದು ಬೆಳಗ್ಗೆ 9.30 ಗಂಟೆಗೆ ಜಿಲ್ಲಾ ಮಟ್ಟದ 'ಜನ ಸ್ಪಂದನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಚುನಾಯಿತ ಪ್ರತಿನಿಧಿಗಳ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಸ್ಥಳದಲ್ಲಿಯೇ ಪರಿಹಾರ ನೀಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಿಕೊಂಡು. ವ್ಯವಸ್ಥಿತವಾಗಿ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಆದ್ದರಿಂದ ಸಾರ್ವಜನಿಕರು ತಮ್ಮ ಕುಂದುಕೊರತೆಗಳ ಆಹವಾಲುಗಳೊಂದಿಗೆ ಜನಸ್ಪಂದನಾ ಸಭೆಯಲ್ಲಿ ಭಾಗವಹಿಸಿ ಪರಿಹಾರ ಕಂಡುಕೊಳ್ಳುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
ನಂ.1 ಜಿಲ್ಲಾಮಟ್ಟದ ದಿನಪತ್ರಿಕೆ
Promote your SSLC & PUC achievers and admission updates in
HAMPI TIMES
PRINT & DIGITAL DAILY NEWS PAPER
Reach Thousands of parents and students. both in print & online
BOOK NOW
Email: hampitimes@gmail.com

Book All Types of legal /Public Notice Display Ads in Newspaper @ Affordable Price
Property Purchase Notice - Lost & Found Notice - Summons Notice - Tender/E-Tender Notice - E-Auction Notice Etc..
9448633038




# ಮೇ 20ರಿಂದ ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ವ್ಯವಸ್ಥೆ

**ಹಂಪಿ ಟೈಮ್ಸ್ ಕೊಪ್ಪಳ**

ಶ್ರೀ ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸುಸಜ್ಜಿತ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗುತ್ತಿದೆ ಎಂದು ಕೊಪ್ಪಳ ಸಂಸದ ಕೆ.ರಾಜಶೇಖರ ಬಸಬರಾಜ ಹಿಟ್ನಾಳ ಹೇಳಿದರು.

ಅವರು ಶುಕ್ರವಾರ ತಮ್ಮ ಕಛೇರಿ ಸಭಾಂಗಣದಲ್ಲಿ 2025ರ ಶ್ರೀ ಹುಲಿಗೆಮ್ಮದೇವಿ ಜಾತ್ರಾ ಮಹೋತ್ಸವದ ನಿಮಿತ್ತ ಶ್ರೀ ಕ್ಷೇತ್ರಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ 2025ನೇ ಸಾಲಿನ ಜಾತ್ರಾ ಮಹೋತ್ಸವವು ಮೇ 20 ರಿಂದ ಮೇ 24ರವರೆಗೆ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಈ ಜಾತ್ರಾ ಮಹೋತ್ಸವವು ಒಂದು ತಿಂಗಳ ಕಾಲ ಜರುಗಲಿದ್ದು, ಈ ಸಮಯದಲ್ಲಿ ಕರ್ನಾಟಕದಾದ್ಯಂತ ಹಾಗೂ ಆಂಧ್ರ, ಮಹಾರಾಷ್ಟ್ರ ಹಾಗೂ ಇನ್ನಿತರೆ ಪ್ರದೇಶಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತಾದಿಗಳು ಶ್ರೀ ದೇವಿಯವರ ದರ್ಶನವನ್ನು ಪಡೆಯಲು ಆಗಮಿಸುತ್ತಿದ್ದಾರೆ ಎಂದರು.

ಸರ್ಕಾರವು ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುತ್ತದೆ. ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿರುವುದರಿಂದ ಈ ಬಾರಿ ಜಾತ್ರಾ ಮಹೋತ್ಸವವನ್ನು ಭಕ್ತಾದಿಗಳಿಗೆ ಸಕಲ ಸೌಲಭ್ಯಗಳನ್ನು ಕಲ್ಪಿಸಿ ಅದ್ದೂರಿಯಾಗಿ ಜಾತ್ರಾ ಮಹೋತ್ಸವವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.



ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಪ್ರತಿನಿತ್ಯ ಪ್ರಸಾದದ ವ್ಯವಸ್ಥೆಯನ್ನು ಮಾಡಲು ಕ್ರಮ ವಹಿಸಲಾಗಿದ್ದು, ಮೇ 12 ರಿಂದ ಒಂದು ತಿಂಗಳ ಕಾಲ ಬೆಳಿಗ್ಗೆ 10 ಗಂಟೆಯಿಂದ ರಾತ್ರಿಯ ತನಕ ನಿರಂತರ ದಾಸೋಹ ಸೇವೆಯನ್ನು ಕಲ್ಪಿಸಲಾಗಿದೆ. ಈ ಬಾರಿಯ ಜಾತ್ರಾ ಮಹೋತ್ಸವವನ್ನು ಇಲಾಖೆಯ ಜೊತೆಗೆ ಸಾರ್ವಜನಿಕ, ಭಕ್ತಾದಿಗಳ ಸಹ ಬಾಗಿತ್ವದಲ್ಲಿ ಅವರ ತನು-ಮನ-ಧನ ಸೇವೆಯನ್ನು ಪಡೆದು ಸ್ವಯಂ ಭಾಗವಹಿಸುವ ಮೂಲಕ ಅದ್ದೂರಿಯಾಗಿ ನೆರವೇರಿಸಲು ಉದ್ದೇಶಿಸಲಾಗಿದೆ ಎಂದರು.

ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಜನದಟ್ಟಣೆ ಸೇರುವ ಎಲ್ಲಾ ಕಡೆಗಳಲ್ಲಿ ಕಲ್ಪಿಸಲು ಸಂಕಲ್ಪ ಮಾಡಲಾಗಿದೆ. ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳಿಗೆ ಕೊಪ್ಪಳ, ಗಂಗಾವತಿ, ಹಿಟ್ನಾಳ್ ಕಡೆಯಿಂದ ಬರುವ ಮಾರ್ಗದಲ್ಲಿ 3 ಕಡೆ ಸ್ನಾನಗೃಹಗಳನ್ನು ಒಳಗೊಂಡ ಪ್ರತ್ಯೇಕ ಪುರುಷ ಮತ್ತು ಮಹಿಳೆಯರ ಶೌಚಾಲಯಗಳನ್ನು ಅದೇ ರೀತಿಯಾಗಿ ಹೊಸಪೇಟೆ ಮಾರ್ಗವಾಗಿ ಬರುವ ಭಕ್ತಾದಿಗಳಿಗೆ ವಿವಿಧ 3 ಕಡೆ ಸ್ನಾನಗೃಹ,ಗಳನ್ನು ಒಳಗೊಂಡ ಪ್ರತ್ಯೇಕ ಪುರುಷ ಮತ್ತುಮಹಿಳೆಯರ ಶೌಚಾಲಯಗಳನ್ನು ಕಲ್ಪಿಸಲಾಗುತ್ತದೆ. ಈ ಬಾರಿ ಪ್ರಥಮ ಬಾರಿಗೆ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸಾರಿಗೆ ವ್ಯವಸ್ಥೆಯನ್ನು ದೇವಸ್ಥಾನದ ಸಮೀಪ ತಲುಪುವಂತೆ ದೇವಸ್ಥಾನದ ಎಡಭಾಗ ಮತ್ತು ಬಲಭಾಗದ ಖಾಸಗಿ ಹೊಲಗಳಲ್ಲಿ ತಾತ್ಕಾಲಿಕ ರಸ್ತೆಗಳನ್ನು ನಿರ್ಮಿಸಿ, ಸರ್ಕಾರಿ ಬಸ್ಸುಗಳಿಗೆ ಹಾಗೂ ಖಾಸಗಿ ಬಸ್ಸುಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ದೇವಸ್ಥಾನದಲ್ಲಿ ಪ್ರಥಮ ಬಾರಿಗೆ ದೇವಸ್ಥಾನಕ್ಕೆ ಸೇರಿದ ವಿವಿಧ ಎಲ್ಲಾ ಕಡೆಗೆ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಪ್ರಸಾದಕ್ಕಾಗಿ ಜರ್ಮನ್ ಹ್ಯಾಂಗರ್ ಹಾಗೂ ಇತರೆ ಸೌಲಭ್ಯ ವಿವಿಧ ಕಡೆಗೆ ಸ್ವಾಗತ ಗೇಟುಗಳನ್ನು, ಫ್ಲೆಕ್ಸ್ ಗೇಟುಗಳು, ಸೈನ್ ಬೋರ್ಡುಗಳನ್ನು ಸಾರ್ವಜನಿಕ ಮಾಹಿತಿ ಕೇಂದ್ರ ಹಾಗೂ ದೇವಸ್ಥಾನದ ವಿವಿಧೆಡೆ ಲೈಟಿಂಗ್ ವ್ಯವಸ್ಥೆ, ಎಲ್.ಇ.ಡಿ. ವಾಲ್-ಗಳನ್ನು ಅಳವಡಿಸಿ ಭಕ್ತಾದಿಗಳಿಗೆ ಅನುಕೂಲವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ದೇವಾಲಯಕ್ಕೆ ಪ್ರತ್ಯೇಕ ವೆಬ್ ಸೈಟ್ ಮತ್ತು ಸಾಮಾಜಿಕ ಜಾಲತಾಣಗಳನ್ನು ಅಳವಡಿಸಿ, ಭಕ್ತಾದಿಗಳಿಗೆ ದೇವಸ್ಥಾನದಲ್ಲಿ ಜರುಗುವ ಧಾರ್ಮಿಕ ಕಾರ್ಯಕ್ರಮಗಳನ್ನು ನೇರವಾಗಿ ನೋಡಲು ಅನುಕೂಲವನ್ನು ಕಲ್ಪಿಸಲಾಗಿದೆ ಎಂದರು.

ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಇಲಾಖೆಯ ಜೊತೆಗೆ ಗ್ರಾಮಸ್ಥರ, ಪ್ರಮುಖರ ಸಮಿತಿಯನ್ನು ರಚಿಸಿ, ಎಲ್ಲಾ ಮೂಲಭೂತ ಸೌಕರ್ಯಗಳ ನಿರ್ವಹಣೆಯ ಜವಾಬ್ದಾರಿಯನ್ನು ಅವರಿಗೆ ನೀಡಿ ಭಕ್ತಾದಿಗಳಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ನಿಗಾ ವಹಿಸಲು ಕ್ರಮ ಜರುಗಿಸಲಾಗುತ್ತಿದೆ. ದೇವಸ್ಥಾನದ ಎಲ್ಲಾ ಕಾರ್ಯಗಳನ್ನು ನೋಡಿಕೊಳ್ಳಲು ಸ್ವಯಂ ಸೇವಕರನ್ನು ನಿಯೋಜಿಸಿ, ಸಾಂಗೋಪಾಂಗವಾಗಿ ನೇರವೇರಲು ಕ್ರಮ ವಹಿಸಲಾಗುತ್ತಿದೆ. ದೇವಸ್ಥಾನದ ಸುತ್ತಮುತ್ತಲ ಪ್ರದೇಶ, ಪಾರ್ಕಿಂಗ್ ಪ್ರದೇಶ, ನದಿ ತೀರ, ಬಯಲು ಪ್ರದೇಶ, ಮುಖ್ಯರಸ್ತೆಯಲ್ಲಿ ಸ್ವಚ್ಛತೆಯನ್ನು ಕಾಪಾಡಲು ಪ್ರತ್ಯೇಕ ಸಮಿತಿಯನ್ನು ರಚಿಸಿ, ಆ ಮೂಲಕ ಸಮಗ್ರ ಕ್ಷೇತ್ರದ ಸ್ವಚ್ಛತೆಗಾಗಿ ಸ್ವಚ್ಛತಾ ಸಿಬ್ಬಂದಿಗಳನ್ನು ಬಳಸಿಕೊಂಡು ಭಕ್ತಾದಿಗಳ ಆರೋಗ್ಯ ಸುರಕ್ಷತೆಗೆ ಕ್ರಮ ವಹಿಸಲಾಗುತ್ತಿದೆ. ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳ ಆರೋಗ್ಯ ಸುರಕ್ಷತೆಗಾಗಿ ವೈದ್ಯರ ತಂಡವನ್ನು ನಿಯೋಜಿಸಲಾಗಿದೆ. ಭಕ್ತಾದಿಗಳ ಸುರಕ್ಷತೆಗಾಗಿ ಅಗ್ನಿಶಾಮಕ ದಳ, ಕಾನೂನು ಮತ್ತು ಸುವ್ಯವಸ್ಥೆಗಾಗಿ ಆರಕ್ಷಕ ತಂಡ ಮತ್ತು ಹೆಚ್ಚಿನ ಗೃಹರಕ್ಷಕ ದಳದ ಸಿಬ್ಬಂದಿಗಳನ್ನು ನಿಯೋಜಿಸಿಕೊಳ್ಳಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ. ಹೆಚ್.ಪ್ರಕಾಶ್‌ರಾವ್, ಪಾಲಾಕ್ಷಪ್ಪ, ವೆಂಕಟೇಶ, ಈರಣ್ಣ ಈಳಿಗೇರ ಸೇರಿದಂತೆ ಹಾಗೂ ಇತರರು ಉಪಸ್ಥಿತರಿದ್ದರು.

# ರಾಜ್ಯ ಮಟ್ಟದ ವುಶು ಚಾಂಪಿಯನ್ ಶಿಪ್ ಪಂದ್ಯಾವಳಿ ವಿಜಯನಗರ ಜಿಲ್ಲೆಗೆ 4 ಚಿನ್ನ – 3 ಕಂಚು

**ಹಂಪಿ ಟೈಮ್ಸ್ ಹೊಸಪೇಟೆ**

ಮಂಗಳೂರಿನಲ್ಲಿ ಇತ್ತೀಚಿಗೆ 24ನೇ ರಾಜ್ಯ ಮಟ್ಟದ ವುಶು ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ವಿಜಯನಗರ ಜಿಲ್ಲೆಯ ವುಶು ಕ್ರೀಡಾಪಟುಗಳು 4 ಚಿನ್ನ ಹಾಗೂ 3 ಕಂಚಿನ ಪದಕ ಗಳಿಸುವ ಮೂಲಕ ರಾಜ್ಯಕ್ಕೆ ಮತ್ತು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಮಂಗಳೂರಿನ ಜಿಲ್ಲಾ ಒಳ ಕ್ರೀಡಾಂಗಣದಲ್ಲಿ ಏ.27 ರಿಂದ 30 ವರೆಗೆ ನಡೆದ ರಾಜ್ಯ ಮಟ್ಟದ ವುಶು ಚಾಂಪಿಯನ್ ಪಂದ್ಯಾವಳಿಯಲ್ಲಿ ಎಸ್.ಅಖಿಲ್, ಅಂಕಿತ, ವಿಜಯಕುಮಾರ್ ಹಾಗೂ ಗಣೇಶ್ ಚಿನ್ನದ ಪದಕವನ್ನು ಗಳಿಸಿ, ಮುಂಬರುವ ರಾಷ್ಟ್ರ ಮಟ್ಟದ ವುಶು ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ಹನುಮಂತ, ರೋಹಣಿ, ಯಶಸ್ಸು ಕಂಚಿನ ಪದಕಗಳನ್ನು ಪಡೆದುಕೊಂಡಿದ್ದು, ಜೆ.ಧೀಕ್ಷಿತ್, ಮಂಜು, ದಿವಾಕರ್ ಉತ್ತಮ ಪ್ರದರ್ಶನ ನೀಡಿ, ಪ್ರಮಾಣ ಪತ್ರ ಪಡೆದಿದ್ದಾರೆ ಎಂದು, ವುಶು ಕ್ರೀಡೆಯ ರಾಜ್ಯಮಟ್ಟದ ತರಬೇತಿದಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಸ್ಟರ್ ಎಸ್, ತಿಪ್ಪೇಸ್ವಾಮಿ ತಿಳಿಸಿದ್ದಾರೆ.



# ಮಕ್ಕಳಿಗೆ ಬೇಸಿಗೆ ಶಿಬಿರ ಉಚಿತ ತರಬೇತಿ ಕಾರ್ಯಗಾರ

**ಹಂಪಿ ಟೈಮ್ಸ್ ಬಳ್ಳಾರಿ**

ರಾಜ್ಯ ಬಾಲಭವನ ಸೊಸೈಟಿ, ಬೆಂಗಳೂರು ಇವರ ವತಿಯಿಂದ ಜಿಲ್ಲಾ ಮಟ್ಟದಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಿದ್ದು, ಶಿಬಿರವು 15 ದಿನಗಳ ಕಾಲ ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 1:30 ಗಂಟೆಯ ವರೆಗೆ ನಡೆಯಲಿದೆ.

ಶಿಬಿರವು ವಿವಿಧ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳಾದ ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಸಮೂಹ ಸಂಗೀತ, ಸಮೂಹ ನೃತ್ಯ, ಯೋಗ, ಕರಾಟೆ, ಇತರೆ ಚಟುವಟಿಕೆಗಳು ನಡೆಯಲಿದ್ದು, ಕಾರ್ಯಕ್ರಮಕ್ಕೆ 05 ರಿಂದ 16 ವರ್ಷದೊಳಗಿನ ಆಸಕ್ತಿಯುಳ್ಳ ಸರಕಾರಿ ಶಾಲೆ ಮಕ್ಕಳು, ಗ್ರಾಮೀಣ ಪ್ರದೇಶ ಹಾಗೂ ಸೌಲಭ್ಯ ವಂಚಿತ ಮಕ್ಕಳಿಗೆ ಸುಧಾರಣಾ ಸಂಸ್ಥೆಗಳ ಬಾಲಕರು-ಬಾಲಕಿಯರ ಬಾಲ ಮಂದಿರದ ಮಕ್ಕಳಿಗೆ ಮೊದಲನೇ ಆದ್ಯತೆ ಹಾಗೂ ಬೇಸಿಗೆ ಶಿಬಿರದ ಚಟುವಟಿಕೆಗಳಲ್ಲಿ 100 ಮಕ್ಕಳಿಗೆ ಮಾತ್ರ ಭಾಗವಹಿಸಲು ಅವಕಾಶ ಇರುತ್ತದೆ.




ಹಾಗಾಗಿ ಮೇ 12 ರಂದು ಸಂಜೆ 05 ಗಂಟೆಯೊಳಗಾಗಿ ನೋಂದಾಯಿಸಿಕೊಳ್ಳಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು. ಮೊದಲು ಬಂದು ತಮ್ಮ ಮಕ್ಕಳ ಹೆಸರು ನೋಂದಾಯಿಸಿದಲ್ಲಿ ಬೇಸಿಗೆ ಶಿಬಿರ ಚಟುವಟಿಕೆಗಳಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.08392-266219, ಕಚೇರಿ ಸಹಾಯಕ ಜೀರ್ ಮಲ್ಲಿಕಾರ್ಜುನ (ಮೊ.9741965198) ಇವರಿಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ತಿಳಿಸಿದ್ದಾರೆ

# ಮೇ 5 ರಂದು ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ

## ಸಂಡೂರು ತಾಲ್ಲೂಕು ತಹಶೀಲ್ದಾರರ ಕಚೇರಿಯಲ್ಲಿ ಬೆಳಿಗ್ಗೆ 9.30ರಿಂದ ಅಹವಾಲು ಸ್ವೀಕಾರ | ಸಂಸದ ಈ ತುಕಾರಾಂ ಅಧ್ಯಕ್ಷತೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲಾ ಅಭಿವೃದ್ಧಿ ಸಮನ್ವಯ ಉಸ್ತುವಾರಿ ಸಮಿತಿ "ದಿಶಾ" ಸಮಿತಿಯ ಸಭೆಯನ್ನು ಮೇ 05 ರಂದು ಬೆಳಿಗ್ಗೆ 10 ಗಂಟೆಗೆ ಸಂಡೂರು ತಾಲ್ಲೂಕಿನ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ನಡೆಸಲು ನಿಗದಿಪಡಿಸಲಾಗಿದೆ.

ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದರು ಹಾಗೂ ಜಿಲ್ಲಾ ಮಟ್ಟದ ದಿಶಾ ಸಮಿತಿಯ ಅಧ್ಯಕ್ಷರೂ ಆದ ಈ.ತುಕಾರಾಂ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ಸಭೆಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಅಗತ್ಯಪೂರ್ಣ ಮಾಹಿತಿಯೊಂದಿಗೆ ತಪ್ಪದೇ ಹಾಜರಾಗಬೇಕು ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ದಿಶಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ತಿಳಿಸಿದ್ದಾರೆ.

**ಅಹವಾಲು ಸ್ವೀಕಾರ:** ಮೇ 05 ರಂದು ಬೆಳಿಗ್ಗೆ 09.30 ಗಂಟೆಗೆ ಸಂಡೂರು ತಾಲ್ಲೂಕು ತಹಶೀಲ್ದಾರರ ಕಚೇರಿಯಲ್ಲಿ ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಹಾಗೂ ಇತರೆ ಯೋಜನೆಗಳ ಕುರಿತಂತೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಅಧಿಕಾರಿಗಳು ತಪ್ಪದೇ ಹಾಜರಿರಬೇಕು ಎಂದು ಅವರು ತಿಳಿಸಿದ್ದಾರೆ.

## ನಿನಗೆ ನೀನೇ ಬೆಳಕು

ಮೊದಲ ಪ್ರಯತ್ನದಲ್ಲಿ ಯಶಸ್ಸು ಸಿಗದಿದ್ದರೆ, ಮತ್ತೊಮ್ಮೆ ಪ್ರಯತ್ನಿಸಿದಾಗ ಯಶಸ್ಸು ಒಲಿಯುತ್ತದೆ.
– ರವೀಂದ್ರನಾಥ ಠಾಗೋರ್

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 02-05-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.24 ಅಡಿ |
| ಒಳ ಹರಿವು | 368 ಕ್ಯೂಸೆಕ್ |
| ಹೊರ ಹರಿವು | 327 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 6.840 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.03 ಅಡಿ |
| ಒಳ ಹರಿವು | 0 ಕ್ಯೂಸೆಕ್ |
| ಹೊರ ಹರಿವು | 120 ಕ್ಯೂಸೆಕ್ |
| ಸಾಮರ್ಥ್ಯ | 3.584 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ | ಸಂವತ್ಸರ: ವಿಶ್ವಾವಸು

03-05-2025 – ಶನಿವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ಶೂಲ |
| ಕರಣ | : ತೈತುಲ |
| ಸೂರ್ಯೋದಯ | : 05:53:39 |
| ಸೂರ್ಯಾಸ್ತ | : 18:54:14 |
| ರಾಹು ಕಾಲ | : 09:09-10:46 |
| ಯಮಘಂಡ ಕಾಲ | : 14:02-15:39 |
| ಗುಳಿಕ ಕಾಲ | : 05:54-07:31 |

# ಮೇ 3ರಂದು ರಿಮ್ಸ್‌ನ 13ನೇ ಘಟಿಕೋತ್ಸವ

**ಹಂಪಿ ಟೈಮ್ಸ್ ರಾಯಚೂರು**

ರಾಯಚೂರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 13ನೇ ಘಟಿಕೋತ್ಸವವು ಮೇ 3ರಂದು ಮಧ್ಯಾಹ್ನ 3 ಗಂಟೆಗೆ ರಿಮ್ಸನ ಆಟಿಟೋರಿಯಂ ಹಾಲನಲ್ಲಿ ಜರುಗಲಿದೆ.

ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣ ಪ್ರಕಾಶ ಪಾಟೀಲ ಅವರು ಉದ್ಘಾಟಿಸು ವರು. ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಡಾ.ಬಿ.ಎಲ್. ಸುಜಾತ ರಾಠೋಡ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಗೌರವ ಅತಿಥಿಗಳಾಗಿ ಉಪಸ್ಥಿತರಿ ರುವರು. ರಾಯಚೂರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾದ ಡಾ.ರಮೇಶ ಬಿಎಚ್ ಅವರು ಅಧ್ಯಕ್ಷತೆ ವಹಿಸುವರು.

